ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


50 1974 2023

ಭಾನುವಾರ, ಮೇ 12, 2024
ದಾವಣಗೆರೆ, ಪುಟ : 8 ರೂ : 5
ಸಂಪುಟ : 50 ಸಂಚಿಕೆ : 361 RNI : 27369/75

janathavani@mac.com
www.janathavani.com
08192 254736 91642 99999

## ಮುಂದಿನ ವರ್ಷ ಮೋದಿ ನಿವೃತ್ತಿ

### ಅಮಿತ್ ಷಾ ಪ್ರಧಾನಿ ಮಾಡಲು ಮೋದಿ ಮತ ಯಾಚನೆ



ನವದೆಹಲಿ, ಮೇ 11 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮುಂದಿನ ವರ್ಷ ನಿವೃತ್ತರಾಗಲಿದ್ದಾರೆ. ಅವರು ಬಿಜೆಪಿ ಹಿರಿಯ ನಾಯಕ ಅಮಿತ್ ಷಾ ಅವರನ್ನು ಪ್ರಧಾನಿ ಮಾಡಲು ಮತ ಕೇಳುತ್ತಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

ಅಕ್ರಮ ಹಣ ಪ್ರಕರಣದಲ್ಲಿ ಸಿಲುಕಿದ್ದ ಕೇಜ್ರಿವಾಲ್, ಜೈಲಿನಿಂದ ಬಿಡುಗಡೆಯಾದ ನಂತರ ಮೊದಲ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯ ಪ್ರಧಾನ ಮಂತ್ರಿ ಯಾರಾಗಲಿದ್ದಾರೆ? ನರೇಂದ್ರ ಮೋದಿ ಅವರಿಗೆ ಮುಂದಿನ ವರ್ಷ 75 ವರ್ಷ ತುಂಬಲಿದೆ. 75 ವರ್ಷವಾದವರು ನಿವೃತ್ತರಾಗಬೇಕು ಎಂದು ಅವರೇ ನಿಯಮ ಮಾಡಿದ್ದರು ಎಂದಿದ್ದಾರೆ.

ಮುಂದಿನ ವರ್ಷ ಮೋದಿ ನಿವೃತ್ತರಾಗಲಿದ್ದಾರೆ. ಅವರು ಅಮಿತ್ ಷಾ ಪ್ರಧಾನ ಮಂತ್ರಿ ಮಾಡಲು ಮತ ಕೇಳುತ್ತಿದ್ದಾರೆ. ಮೋದೀಜಿ ಅವರ ಗ್ಯಾರಂಟಿಗಳನ್ನು ಅಮಿತ್ ಷಾ ಈಡೇರಿಸಲಿದ್ದಾರೆಯೇ? ಎಂದು ಕೇಜ್ರಿವಾಲ್ ಪ್ರಶ್ನಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಬಿಜೆಪಿ ನಾಯಕ ಹಾಗೂ ಗೃಹ ಸಚಿವ ಅಮಿತ್ ಷಾ, ಪ್ರಧಾನಿಗೆ 75 ವರ್ಷವಾದ ನಂತರ ನಿವೃತ್ತರಾಗಲಿದ್ದಾರೆ ಎಂಬುದು ತಪ್ಪು ಕಲ್ಪನೆ. 75 ವರ್ಷದ ವಯೋಮಿತಿಯ ಯಾವುದೇ ನಿಯಮ ಬಿಜೆಪಿ ಸಂವಿಧಾನದಲ್ಲಿ ಇಲ್ಲ ಎಂದಿದ್ದಾರೆ.

ಪ್ರಧಾನಿ ಮೋದಿ ಅವರೇ ಪೂರ್ಣಾವಧಿಗೆ ಪ್ರಧಾನಿಯಾಗಲಿದ್ದಾರೆ. ಅವರೇ ದೇಶವನ್ನು ಮುನ್ನಡೆಸಲಿದ್ದಾರೆ. ಈ ಬಗ್ಗೆ ಬಿಜೆಪಿಯಲ್ಲಿ ಯಾವುದೇ ಗೊಂದಲ ಇಲ್ಲ ಎಂದಿದ್ದಾರೆ.

## ಪರಿಷತ್ ಚುನಾವಣೆ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಬೆಂಗಳೂರು, ಮೇ 11 - ಜೂನ್ 3ರಂದು ನಡೆಯಲಿರುವ ವಿಧಾನ ಪರಿಷತ್ ಚುನಾವಣೆಗೆ ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಶನಿವಾರ ಪ್ರಕಟಿಸಿದೆ.

ವಿಧಾನ ಪರಿಷತ್‌ನ 6 ಕ್ಷೇತ್ರಗಳ ಪೈಕಿ 1 ಕ್ಷೇತ್ರವನ್ನು ಮಿತ್ರ ಪಕ್ಷ ಜೆಡಿಎಸ್‌ಗೆ ಬಿಜೆಪಿ ಬಿಟ್ಟುಕೊಟ್ಟಿದೆ.

ವಿಧಾನ ಪರಿಷತ್‌ನ ನೈಋತ್ಯ ಶಿಕ್ಷಕರ ಕ್ಷೇತ್ರದಲ್ಲಿ ಜೆಡಿಎಸ್ ಸ್ಪರ್ಧೆ ಮಾಡಲಿದೆ.

ಉಳಿದ ಐದು ಕ್ಷೇತ್ರಗಳಿಗೆ ಬಿಜೆಪಿ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿದ್ದು, ಪರಿಷತ್‌ನ ಈಶಾನ್ಯ ಪದವೀಧರ ಕ್ಷೇತ್ರದಿಂದ ಅಮರನಾಥ್ ಪಾಟೀಲ್, ಪರಿಷತ್‌ನ ನೈಋತ್ಯ ಪದವೀಧರ ಕ್ಷೇತ್ರದಿಂದ ಧನಂಜಯ ಸರ್ಜಿ, ಪರಿಷತ್‌ನ ಬೆಂಗಳೂರು ಪದವೀಧರ ಕ್ಷೇತ್ರದಿಂದ ಎ.ದೇವೇಗೌಡ, ಪರಿಷತ್‌ನ ಆಗ್ನೇಯ (5ನೇ ಪುಟಕ್ಕೆ)

# 18 ಸ್ಥಾನ ಗೆದ್ದರೆ ಸಂಭ್ರಮಾಚರಣೆ

### ಮೇ 20ಕ್ಕೆ ಸರ್ಕಾರಕ್ಕೆ ಒಂದು ವರ್ಷ, ಹಬ್ಬ ಆಚರಣೆಗೆ ನೀತಿ ಸಂಹಿತೆ ಅಡ್ಡಿ

ಬೆಂಗಳೂರು, ಮೇ 11 - ಲೋಕಸಭಾ ಚುನಾವಣೆಯಲ್ಲಿ 18ಕ್ಕೂ ಹೆಚ್ಚು ಸ್ಥಾನಗಳನ್ನು ಪಕ್ಷ ಗಳಿಸಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಸರ್ಕಾರದ ಮೊದಲ ವರ್ಷ ಪೂರ್ಣಗೊಳಿಸಿದ ಸಾಧನಾ-ಸಂಭ್ರಮ ಆಚರಣೆಗೆ ತೀರ್ಮಾನಿಸಿದ್ದಾರೆ.

ಸಿದ್ದರಾಮಯ್ಯ ಸರ್ಕಾರಕ್ಕೆ ಮೇ 20ಕ್ಕೆ ಒಂದು ವರ್ಷ ಪೂರ್ಣಗೊಳ್ಳಲಿದೆ, ಅಲ್ಲದೆ ಜೂನ್ 20ಕ್ಕೆ ತಮ್ಮ ಸರ್ಕಾರದ ಮಹತ್ವದ ಐದು ಗ್ಯಾರಂಟಿ ಯೋಜನೆಗಳಿಗೆ ಚಾಲನೆ ನೀಡಿದ ದಿನ. ಎರಡೂ ಸಾಧನೆಗಳನ್ನು ಒಟ್ಟಾಗಿ ಸಂಭ್ರಮಿಸಲು ಕಾಂಗ್ರೆಸ್ ಸರ್ಕಾರ ನಿರ್ಧರಿಸಿದೆ.

ಚುನಾವಣಾ ಮಾದರಿ ನೀತಿ ಸಂಹಿತೆ ಜೂನ್ 6ರವರೆಗೆ ಇರುವುದರಿಂದ ಇದಕ್ಕೂ ಮೊದಲು ಸರ್ಕಾರಕ್ಕೆ ಒಂದು ವರ್ಷ ತುಂಬಿದ ಹಬ್ಬ ಆಚರಿಸಿಕೊಳ್ಳಲು ಸಾಧ್ಯವಿಲ್ಲ.

ಸಂಭ್ರಮಾಚರಣೆಗಾಗಿ ಸರ್ಕಾರ ಮಾಡಿದ ಮನವಿಯನ್ನು ಆಯೋಗ ತಿರಸ್ಕರಿಸಿದೆ. ಹೀಗಾಗಿ ಲೋಕಸಭಾ ಚುನಾವಣೆ ಫಲಿತಾಂಶದ ನಂತರವೇ ಆಚರಣೆಯ ರೂಪುರೇಷೆ ನಿರ್ಧಾರವಾಗಲಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ 18 ಸ್ಥಾನಗಳ ನಿರೀಕ್ಷೆಯಲ್ಲಿರುವ ಮುಖ್ಯಮಂತ್ರಿ ಅವರು, ಆ ಗುರಿ ಮುಟ್ಟಿ ಇಡೀ ರಾಷ್ಟ್ರದಲ್ಲಿ ಬೇರೆ ಯಾವುದೇ ರಾಜ್ಯದಲ್ಲಿ ಕಾಂಗ್ರೆಸ್ ಇಂತಹ ಸಾಧನೆ ಮಾಡದಿದ್ದರೆ ಅದನ್ನು ದೊಡ್ಡ ಸಂಭ್ರಮವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ.

ಒಂದು ವೇಳೆ ತಮ್ಮ ನಿರೀಕ್ಷೆಯ ಗುರಿ ಮುಟ್ಟದಿದ್ದರೆ, ಸಂಭ್ರಮವನ್ನು ಸರಳವಾಗಿ ಆಚರಿಸಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

ಇದೇ ಉದ್ದೇಶಕ್ಕಾಗಿ ಮುಖ್ಯಮಂತ್ರಿ ಅವರು ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಹೋರಾಟ ನಡೆಸಿರುವ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಿದ್ದಾರೆ.



ಇತಿಹಾಸದ ಚುನಾವಣಾ ಸಂದರ್ಭದಲ್ಲಿ ಯಾವುದೇ ಮುಖ್ಯಮಂತ್ರಿಗಳು ತಾವು ಎಷ್ಟು ಚುನಾವಣಾ ಭಾಷಣ, ರೋಡ್ ಶೋ ನಡೆಸಿದ ವಿವರಗಳನ್ನು ಬಹಿರಂಗ ಪಡಿಸಿರಲಿಲ್ಲ.

ಆದರೆ ಇವರು, ಕಳೆದ ನಾಲ್ಕು ತಿಂಗಳಿಂದ ಚುನಾವಣಾ ಪೂರ್ವ ಮತ್ತು ಚುನಾವಣಾ ದಿನಾಂಕ ಪ್ರಕಟಣೆ ನಂತರ ಮಾಡಿದ ಪ್ರಚಾರಕ್ಕೆ ಸಂಬಂಧಿಸಿದಂತೆ ಪೂರ್ಣ ಮಾಹಿತಿ ನೀಡಿದ್ದಾರೆ. ಇದು ಕಾಂಗ್ರೆಸ್ ವಲಯದಲ್ಲೂ ಚರ್ಚೆಗೆ ಗ್ರಾಸವಾಗಿದೆ. ಹೆಚ್ಚು ಸ್ಥಾನ ಗಳಿಸಿದರೆ ತನ್ನಿಂದಲೇ ಎಂದು ಬಿಂಬಿಸಿಕೊಳ್ಳಲು ಮುಖ್ಯಮಂತ್ರಿ ಅವರು ಈ ಮಾಹಿತಿ ಹೊರಗಿಟ್ಟಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ತಮ್ಮ ಅನಿಸಿಕೆಯಂತೆ ಎಲ್ಲವೂ ಸರಿ ಹೋದರೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಗುಲ್ಬರ್ಗದಲ್ಲಿ ನಾಲ್ಕು ಬೃಹತ್ (5ನೇ ಪುಟಕ್ಕೆ)

## ಆಫ್ಘಾನ್ ಕ್ಷಿಪ್ರ ಪ್ರವಾಹಗಳಲ್ಲಿ ನೂರಾರು ಜನರು ಸಾವು

ಇಸ್ಲಮಾಬಾದ್, ಮೇ 11 – ಆಫ್ಘಾನಿಸ್ತಾನದಲ್ಲಿ ಉಂಟಾದ ಕ್ಷಿಪ್ರ ಪ್ರವಾಹಗಳಿಂದ ನೂರಾರು ಜನರು ಸಾವನ್ನಪ್ಪಿದ್ದಾರೆ ಹಾಗೂ ಹಲವರು ಗಾಯಗೊಂಡಿದ್ದಾರೆ ಎಂದು ತಾಲಿಬಾನ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ದೇಶದ ಉತ್ತರ ಭಾಗದಲ್ಲಿ ಹೆಚ್ಚಿನ ಪ್ರವಾಹಗಳು ಸಂಭವಿಸಿವೆ. ಬಘ್ಲಾನ್ ಪ್ರದೇಶ ಒಂದರಲ್ಲೇ ಕನಿಷ್ಠ 50 ಜನ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಡಾಕ್ಷನ್, ಬಗ್ಲಾನ್, ಘೋರ್ ಹಾಗೂ ಹೇರತ್ ಪ್ರಾಂತ್ಯಗಳಲ್ಲಿ ಪ್ರವಾಹಗಳಿಂದ ಅತಿ ಹೆಚ್ಚು ಹಾನಿಯಾಗಿದೆ ಎಂದು ತಾಲಿಬಾನ್ ಮುಖ್ಯ ವಕ್ತಾರ ಜಬೀನುಲ್ಲಾ ಮುಜಾಹಿದ್ ಹೇಳಿದ್ದಾರೆ.

## ಕಣ್ವಕುಪ್ಪೆ ಗವಿಮಠದ ಶ್ರೀಗಳ ತಾಯಿ ಶಾರದಮ್ಮ ನಿಧನ



ಶಿಕಾರಿಪುರ, ಮೇ 11 - ಜಗಳೂರು ತಾಲ್ಲೂಕು ಕಣ್ವ ಕುಪ್ಪೆ ಗವಿಮಠದ ಶ್ರೀ ಡಾ. ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪೂರ್ವಾಶ್ರಮದ ತಾಯಿ ಹಾಗೂ ಚಿಕ್ಕಮಾಗಡಿ ಹಿರೇಮಠದ ಶ್ರೀ ವೇ|| ಡೇರಯ್ಯಸ್ವಾಮಿ ಅವರ ಧರ್ಮಪತ್ನಿ ಶ್ರೀಮತಿ ಶಾರದಮ್ಮ ಅವರು ಇಂದು ರಾತ್ರಿ 7.30 ಕ್ಕೆ ನಿಧನರಾದರು.

ಪತಿ, ಮಕ್ಕಳು ಹಾಗೂ ಅಪಾರ (5ನೇ ಪುಟಕ್ಕೆ)

## ಅಂತರರಾಷ್ಟ್ರೀಯ ಕಾನೂನು ಉಲ್ಲಂಘಿಸಿದ ಇಸ್ರೇಲ್

ವಾಷಿಂಗ್ಟನ್, ಮೇ 11 - ಅಮೆರಿಕವು ಇಸ್ರೇಲ್‌ಗೆ ಒದಗಿಸಿದ ಶಸ್ತ್ರಗಳನ್ನು ಗಾಜಾದಲ್ಲಿ ಬಳಕೆ ಮಾಡಿರುವುದು ಅಂತರರಾಷ್ಟ್ರೀಯ ಮಾನವೀಯ ಕಾನೂನಿನ ಉಲ್ಲಂಘನೆ ಎಂದು ಅಮೆರಿಕದ ಜೋ ಬಿಡೆನ್ ಆಡಳಿತ ಹೇಳಿದೆ.

ಆದರೆ, ಯುದ್ಧದಂತಹ ಪರಿಸ್ಥಿತಿಯ ಕಾರಣದಿಂದಾಗಿ ಕೆಲ ನಿರ್ದಿಷ್ಟ ವೈಮಾನಿಕ ದಾಳಿಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದೂ ಹೇಳಲಾಗಿದೆ.

**ಅಮೆರಿಕದ ಜೋ ಬಿಡೆನ್ ಆಡಳಿತ ಆರೋಪ**

ಇಸ್ರೇಲ್ ಕುರಿತು ಇದುವರೆಗಿನ ಬಿಡೆನ್ ಆಡಳಿತದ ಅತ್ಯಂತ ಕಠಿಣವಾದ ಹೇಳಿಕೆ ಇದಾಗಿದೆ. ಆದರೆ, ಈ ಹೇಳಿಕೆಯ ಜೊತೆಗೆ ಸ್ಪಷ್ಟನೆಯನ್ನೂ ನೀಡಿರುವುದರಿಂದ, ಇಸ್ರೇಲ್ ವಿರುದ್ಧ ಯಾವುದೇ ಕ್ರಮದ ಸಾಧ್ಯತೆ ಇಲ್ಲದಂತಾಗಿದೆ.

ಕಳೆದ ಏಳು ತಿಂಗಳಿನಿಂದ ಇಸ್ರೇಲ್ ಹಾಗೂ ಹಮಾಸ್ ನಡುವೆ ಸಂಘರ್ಷ ನಡೆಯುತ್ತಿದೆ. ಇದರಿಂದಾಗಿ ಗಾಜಾದಲ್ಲಿ ಜನರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ.

ನಾಗರಿಕರಿಗೆ ಹಾನಿಯಾಗುವುದನ್ನು ತಡೆಯುವ ತಂತ್ರಜ್ಞಾನದ ಬಗ್ಗೆ ಇಸ್ರೇಲ್‌ಗೆ ಅರಿವಿದೆ. ಆದರೆ, ವಾಸ್ತವವಾಗಿ ಹೆಚ್ಚು ಜನರ ಸಾವುಗಳು ಸಂಭವಿಸಿದೆ. ಇಸ್ರೇಲ್ ಪರಿಣಾಮಕಾರಿಯಾಗಿ ತಂತ್ರಜ್ಞಾನ ಬಳಸುತ್ತಿದೆಯೇ ? ಎಂಬ ಪ್ರಶ್ನೆ ಉದ್ಭವಿಸಿದೆ ಎಂದು ಅಮೆರಿಕದ ವರದಿಯಲ್ಲಿ ತಿಳಿಸಲಾಗಿದೆ.

ಇಸ್ರೇಲ್ ನಡೆಸಿದ ಹತ್ತಾರು ವೈಮಾನಿಕ ದಾಳಿಗಳು ಸಮರ ಹಾಗೂ ಮಾನವೀಯ ಕಾಯ್ದೆಗಳ ಉಲ್ಲಂಘನೆ ಎಂದು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಸಂಘಟನೆಗಳು ಹೇಳಿವೆ. ನೆರವಿನ ವಾಹನಗಳು, ವೈದ್ಯಕೀಯ ವಲಯದವರು, ಆಸ್ಪತ್ರೆ, ಪತ್ರಕರ್ತರು, ಶಾಲೆಗಳು ಹಾಗೂ ನಿರಾಶ್ರಿತರ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಸಂಘಟನೆಗಳು ತಿಳಿಸಿವೆ.

ಆದರೆ, ಅಮೆರಿಕದ ಕಾನೂನು ಹಾಗೂ ಎಲ್ಲಾ ಅಂತರರಾಷ್ಟ್ರೀಯ ಕಾನೂನುಗಳನ್ನು ಪಾಲಿಸುತ್ತಿರುವುದಾಗಿ ಇಸ್ರೇಲ್ ತಿಳಿಸಿದೆ.

## ಲಡಾಖ್‌ನಲ್ಲಿ ಅಪರೂಪದ ಅರೋರಾ ಕೆಂಪು ಬೆಳಕು

ನವದೆಹಲಿ, ಮೇ 11 – ಸೌರ ಅಯಸ್ಕಾಂತೀಯ ಬಿರುಗಾಳಿಯ ಕಾರಣದಿಂದಾಗಿ ಲಡಾಖ್‌ನ ಕೆಲ ಭಾಗಗಳಲ್ಲಿ ಅಪರೂಪದ ಸ್ಥಿರವಾದ ಅರೋರಾ ಕೆಂಪು ಬೆಳಕು ಕಾಣಿಸಿಕೊಂಡಿದೆ.

ಹ್ಯಾನ್ಲೆ ಡಾರ್ಕ್ ಸ್ಕೈ ರಿಸರ್ವ್ ಬಳಿ ಅಪರೂಪದ ವಿದ್ಯಾಮಾನ ಕಂಡು ಬಂದಿದೆ. ಸೌರ ಬಿರುಗಾಳಿ ಸಂದರ್ಭದಲ್ಲಿ ಹೆಚ್ಚಿನ ಶಕ್ತಿಯುಳ್ಳ ಸೌರ ಜ್ವಾಲೆ ಕಾಣಿಸಿಕೊಳ್ಳುತ್ತದೆ. ಇವುಗಳಲ್ಲಿ ಕೆಲವು ಅತಿ ವೇಗದಲ್ಲಿ ಸೆಕೆಂಡಿಗೆ 800 ಕಿ.ಮೀ. ವೇಗದಲ್ಲಿ ಬಂದಿವೆ ಎಂದು ಕೊಲ್ಕೊತಾದ ಸಿ.ಇ.ಎಸ್.ಎಸ್.ಐ. ಸಂಸ್ಥೆ ತಿಳಿಸಿದೆ. ಉತ್ತರದ ಬೆಳಕು ಎನ್ನಲಾಗುವ ಅರೋರಾಗಳು ಸಾಮಾನ್ಯವಾಗಿ ಆಸ್ಟ್ರಿಯಾ, ಜರ್ಮನಿ, ಸ್ಲೋವೇಕಿಯ, ಸ್ವಿಟ್ಜರ್‌ಲ್ಯಾಂಡ್, ಡೆನ್ಮಾರ್ಕ್ ಹಾಗೂ ಪೋಲ್ಯಾಂಡ್‌ಗಳಲ್ಲಿ ಕಾಣಿಸಿಕೊಳ್ಳುತ್ತವೆ.

ಲಡಾಖ್‌ನ ಹ್ಯಾನ್ಲೆ ಡಾರ್ಕ್ ಸ್ಕೈ ರಿಸರ್ವ್‌ನಲ್ಲಿ ಶನಿವಾರ ಬೆಳಗಿನ ಜಾವ 1 ಗಂಟೆಯ ವೇಳೆ ಈ ಬೆಳಕು ಕಾಣಿಸಿಕೊಂಡಿತ್ತು. ಬೆಳಗಿನ ಜಾವದವರೆಗೂ ಬೆಳಕು ಮುಂದುವರೆದಿದೆ.

ಈ ಬಗ್ಗೆ ಮಾತನಾಡಿರುವ ಹ್ಯಾನ್ಲೆ ಡಾರ್ಕ್ ಸ್ಕೈ ರಿಸರ್ವ್‌ನ ಇಂಜಿನಿಯರ್



ಸ್ಟಾನ್‌ಜಿನ್ ನೋರ್ಲ, ಬೆಳಿಗ್ಗೆ 1ರಿಂದ 3.30ರವರೆಗೆ ಬೆಳಕು ಕಾಣಿಸಿಕೊಂಡಿತ್ತು. ದಿಗಂತದಲ್ಲಿ ಮೊದಲು ಕೆಂಪು ನಂತರದಲ್ಲಿ ಗುಲಾಬಿ ಬಣ್ಣದ ಬೆಳಕು ಕಂಡು ಬಂದಿತ್ತು ಎಂದು ಹೇಳಿದ್ದಾರೆ.

ಲಡಾಖ್‌ನಲ್ಲಿ ಸ್ಥಿರವಾದ ಅರೋರಾ ಕೆಂಪು ಬೆಳಕಿನ ಛಾಯೆ ಕಂಡು ಬರುವುದು ಅಪರೂಪ ಎಂದು ಹ್ಯಾನ್ಲೆ ವೀಕ್ಷಣಾಲಯದ ಇಂಜಿನಿಯರ್ ಡೊರ್ಜೆ ಆಂಗ್‌ಚುಕ್ ಹೇಳಿದ್ದಾರೆ.

ಉತ್ತರ ಇಲ್ಲವೇ ದಕ್ಷಿಣ ಧೃವಗಳಲ್ಲಿ ಕಂಡು ಬರುವ ಅರೋರಾಗಳು ಚಲನಶೀಲವಾಗಿರುತ್ತವೆ. ಆದರೆ, ಲಡಾಖ್‌ನಲ್ಲಿನ ಅರೋರಾ ಸ್ಥಿರವಾಗಿದೆ. ಹಲವು ಗಂಟೆಗಳ ಕಾಲ ಈ ರೀತಿಯ ಬೆಳಕಿರುತ್ತದೆ ಎಂದು ಆಂಗ್‌ಚುಕ್ ಹೇಳಿದ್ದಾರೆ.

## ಸಿರಿಗೆರೆಯ ಸದ್ಧರ್ಮ ನ್ಯಾಯಪೀಠಕ್ಕೆ ನಾಳೆ ಬಿಡುವು



ಸಿರಿಗೆರೆ, ಮೇ 11- ಇಲ್ಲಿನ ತರಳಬಾಳು ಬೃಹನ್ಮಠದಲ್ಲಿ ನಾಡಿದ್ದು ದಿನಾಂಕ 13ರ ಸೋಮವಾರ ಮತ್ತು ಇದೇ ದಿನಾಂಕ 20ರ ಸೋಮವಾರ ನಡೆಯಬೇಕಿದ್ದ ಸದ್ಧರ್ಮ ನ್ಯಾಯಪೀಠದ ಕಾರ್ಯ ಕಲಾಪಗಳನ್ನು ಮುಂದೂಡಲಾಗಿದೆ.

ಮಸ್ಕತ್ ಮತ್ತು ದುಬೈಗಳಲ್ಲಿ ನಡೆಯಲಿರುವ ಬಸವ ಜಯಂತಿ ಕಾರ್ಯಕ್ರಮಗಳಲ್ಲಿ ಜಗದ್ಗುರು ಡಾ|| ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಪಾಲ್ಗೊಳ್ಳುವ ನಿಟ್ಟಿನಲ್ಲಿ ಪ್ರವಾಸ ಕೈಗೊಂಡಿರುವ ಕಾರಣ, ನ್ಯಾಯಪೀಠದ ಕಾರ್ಯ ಕಲಾಪಗಳು ನಡೆಯುವುದಿಲ್ಲ ಎಂದು ನ್ಯಾಯಪೀಠದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪುಸ್ತಕದ ಹೆಸರಿನಲ್ಲಿ 'ಬೈಬಲ್' ಬಳಕೆ : ಕರೀನಾಗೆ ನೋಟಿಸ್

ಜಬಲ್ಪುರ್, ಮೇ 11 – ಬಾಲಿವುಡ್ ನಟಿ ಕರೀನಾ ಕಪೂರ್ ಖಾನ್ ಅವರ ಪುಸ್ತಕದ ಹೆಸರಿನಲ್ಲಿ 'ಬೈಬಲ್' ಎಂದಿರುವ ಬಗ್ಗೆ ಆಕ್ಷೇಪಿಸಿ ಮಧ್ಯಪ್ರದೇಶದ ಹೈಕೋರ್ಟ್‌ನಲ್ಲಿ ಅರ್ಜಿಯೊಂದು ದಾಖಲಿಸಲಾಗಿದೆ. ಹೈಕೋರ್ಟ್ ನಟಿಗೆ ನೋಟಿಸ್ ಕಳಿಸಿದೆ.

ಕರೀನಾ ಕಪೂರ್ ಅವರು ಬರೆದ 'ಕರೀನಾ ಕಪೂರ್ ಖಾನ್ ಪ್ರೆಗ್ನೆನ್ಸಿ ಬೈಬಲ್ : ದಿ ಅಲ್ಟಿಮೇಟ್ ಮ್ಯಾನುಯಲ್ ಫಾರ್ ಮಾಮ್ಸ್ - ಟು - ಬಿ' ಎಂಬ ಪುಸ್ತಕದ ಮೂಲಕ ಕ್ರಿಶ್ಚಿಯನ್ ಸಮುದಾಯದ ಭಾವನೆಗಳಿಗೆ ಧಕ್ಕೆ ತರಲಾಗಿದೆ ಎಂದು ದೂರಲಾಗಿದೆ. (5ನೇ ಪುಟಕ್ಕೆ)

# ಜಿಲ್ಲಾ ರಾಜಕೀಯದಲ್ಲಿ ಬದಲಾವಣೆ ಗಾಳಿ

### ಬಂಡವಾಳಶಾಹಿ ರಾಜಕಾರಣ ಮುಕ್ತಿಗೊಳಿಸೋಣ : ವಿನಯ್ ಕುಮಾರ್



ದಾವಣಗೆರೆ, ಮೇ 11- ಜೂ. 1ರಿಂದ ದಾವಣಗೆರೆ ಜಿಲ್ಲೆಯ ರಾಜಕಾರಣದಲ್ಲಿ ಭಾರೀ ಬದಲಾವಣೆ ಗಾಳಿ ಬೀಸುವುದು ಖಚಿತ. ಇನ್ನು 30 ವರ್ಷ ಇಲ್ಲಿಂದ ಕದಲುವುದಿಲ್ಲ. ಬಂಡವಾಳ ಶಾಹಿಗಳ ರಾಜಕಾರಣವನ್ನು ಮುಕ್ತಿಗೊಳಿಸೋಣ. ರಾಜಕಾರಣಿಗಳು ಉದ್ಯಮಿಗಳಾಗಿ ಜನರ ವಿಶ್ವಾಸ, ನಂಬಿಕೆ ಕಳೆದುಕೊಂಡಿದ್ದಾರೆ. ಚುನಾವಣೆಗಳಲ್ಲಿ ನೂರಾರು ಕೋಟಿ ರೂಪಾಯಿ ಚೆಲ್ಲಿ ಗೆಲ್ಲುವ ವ್ಯವಸ್ಥೆ ಬದಲಾಗಬೇಕಿದೆ. ಈ ವ್ಯವಸ್ಥೆ ಸರಿಪಡಿಸಲು ಐದು ವರ್ಷ, ಇಲ್ಲವೇ ಹತ್ತು ವರ್ಷಗಳು ಆಗಬಹುದು ಎಂದು ದಾವಣಗೆರೆ ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ಹೇಳಿದರು.

ನಗರದ ಬಂಟರ ಭವನದಲ್ಲಿ ಇಂದು ಆಯೋಜಿಸಿದ್ದ ಮತದಾರರಿಗೆ 'ಕೃತಜ್ಞತಾ ಸಮಾರಂಭ' ಹಾಗೂ 'ಇದು ಅಂತ್ಯವಲ್ಲ, ಆರಂಭ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.


ಭಯದ ವಾತಾವರಣದಲ್ಲಿ ಅಸ್ಮಿತೆ ಕಳೆದು ಕೊಂಡು ಬದುಕುವುದು ಬೇಡ, ಸ್ವಾಭಿಮಾನಿಗಳಾಗಿ ಹೋರಾಡೋಣ. ಜೂ.1 ರ ಬಳಿಕ ಜಿಲ್ಲೆಯ ಪ್ರತಿಯೊಂದು ಶಾಲೆ, ಕಾಲೇಜಿಗೆ ಭೇಟಿ ನೀಡಿ ಮಕ್ಕಳೊಂದಿಗೆ ಸಂವಾದ ನಡೆಸುತ್ತೇನೆ. ಅವರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುತ್ತೇನೆ. ಶಿಕ್ಷಣದ ಮಹತ್ವ ತಿಳಿಸಿಕೊಡುವ ಕೆಲಸವನ್ನು ನಿರಂತರವಾಗಿ ನಡೆಸುತ್ತೇನೆ ಎಂದು ತಿಳಿಸಿದರು.

ಏಕಾಭಿಮುಖ ನಿರ್ಧಾರ ಇಲ್ಲ. ಭಾರತೀಯ ಚುನಾವಣಾ ಇತಿಹಾಸದಲ್ಲಿ ಕ್ರಾಂತಿಕಾರಕ ಬದಲಾವಣೆ ತರುತ್ತೇನೆ. 3 ಲಕ್ಷ ಮತಗಳು ಸಿಕ್ಕರೆ ಹೊಸ ಭವಿಷ್ಯಕ್ಕೆ ನಾಂದಿ ಹಾಡಿದಂತೆ. ಒಂದೂ ರೂಪಾಯಿ ಮುಟ್ಟದೇ ಎರಡು ರಾಷ್ಟ್ರೀಯ ಪಕ್ಷಗಳ ಎದುರು ಹಾಕಿಕೊಂಡು ಸ್ವಾಭಿಮಾನಿಗಳಾಗಿ ನನ್ನ ಪರವಾಗಿ ಮತ ಚಲಾಯಿಸಿದ್ದೀರಾ. ಇವರೆಲ್ಲರ ಆಶೀರ್ವಾದ ನನ್ನ ಮೇಲಿದೆ. ಶಿಕ್ಷಣ, ಸಂಘಟನೆ, ಹೋರಾಟಕ್ಕೆ ಹೆಚ್ಚಿನ ಆದ್ಯತೆ ಸಿಕ್ಕಿದೆ ಎಂಬುದು ನನ್ನ ಭಾವನೆ ಎಂದ (5ನೇ ಪುಟಕ್ಕೆ)

Vishnu Educational Trust (R)
MAYUR GLOBAL SCHOOL
ICSE Affiliation No-KA431
The Best ICSE School in Davangere
TEACHERS WANTED

| Subject | Qualification |
| --- | --- |
| Physics | M.Sc (Phy) BEd |
| Biology | M.Sc (Bio) BEd |
| Social Science | M.A., B.Ed (History) |
| Geography | M.Sc (Geo) B.Ed |
| EVS | M.A. (History + Civics) + B.Ed |
| Nursery,LKG, UKG | (NTC+Any degree) |


- Salary Negotiable for well Qualified and Experienced Teachers
- Whatsapp your Resume to 9844060736, 8050553355



Tejas D.M 92.4% | Khushi N.C 90.6% | Chiranthan C.K 83.2%

Grade X-1st Batch 2023-24
100% Result
Appeared-9 Distinction-3
First Class-6
ADMISSIONS IN PROGRESS

ಹಜ್ ಯಾತ್ರೆ : ಶುಭ ಹಾರೈಕೆ





ದಾವಣಗೆರೆ ನ್ಯೂ ಮಸ್ಜೀದ್ ರೋಡ್ ವಾಸಿ,
ದಿನಾಂಕ 12-05-2024ರ ಭಾನುವಾರ ದಾವಣಗೆರೆಯಿಂದ
ಹೊರಟು ಬೆಂಗಳೂರು ಮುಖಾಂತರ ದಿನಾಂಕ 14-05-2024ರಂದು
ಮೆಕ್ಕಾ ಮದೀನಾ ಹಜ್‌ಯಾತ್ರೆಗೆ
ಪ್ರವಾಸ ಕೈಗೊಂಡಿರುವ ನಮ್ಮೆಲ್ಲರ ಮಾರ್ಗದರ್ಶಕರೂ,
ಹಿರಿಯರೂ, ಸಮಾಜ ಸೇವಕರೂ ಹಾಗೂ
ಸಿಂಡಿಕೇಟ್ ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕರೂ ಆದ
ಜನಾಬ್ ಮೊಹಮ್ಮದ್
ಅತಾವುಲ್ಲಾ ಹಕ್ಕಾನಿ ಅವರು ತಮ್ಮ ಪತ್ನಿ
ಶ್ರೀಮತಿ ಫಾಮೀದಾ ಬೇಗಂ ಅವರೊಂದಿಗೆ
ತೆರಳುತ್ತಿರುವ ಈ ಶುಭ ಸಂದರ್ಭದಲ್ಲಿ, ಇವರ ಪ್ರಯಾಣ
ಸುಖಕರವಾಗಲಿ, ಅಲ್ಲಾಹನ ಕೃಪೆಯಿಂದ ಇವರ ಹಜ್
ಯಾತ್ರೆ ಯಶಸ್ವಿಯಾಗಲಿ ಎಂದು ಶುಭ ಕೋರುವವರು :

- ಜನಾಬ್ ನಾಸೀರ್ ಕೊಲಾರಿ ಮತ್ತು ಮಕ್ಕಳು
  ಮಂಡಕ್ಕಿ ಭಟ್ಟಿ ವರ್ತಕರು, ಮಾಲೀಕರು, ಕೆ.ಆರ್.ಎಸ್. ಟ್ರೇಡರ್ಸ್
- ಜನಾಬ್ ಮಹಮ್ಮದ್ ಆಸೀಫ್ ಕೊಲಾರಿ ಹಾಗೂ ಸಹೋದರರು
  ಮೆ|| ಎ.ಎಸ್.ಕೆ. ಪೋಹಾ ಮಿಲ್
- ಜನಾಬ್ ಹೆಚ್. ಫೈರೋಜ್‌ಖಾನ್ ಹಾಗೂ ಸಹೋದರರು
  ಮೆ|| ಮೆಹಬೂಬ್ ಬೀ ಅವಲಕ್ಕಿ ಮಿಲ್
- ಜನಾಬ್ ಹೆಚ್. ಇಮ್ತಿಯಾಜ್ ಬೇಗ್, ಜಿಲ್ಲಾ ಕಾಂಗ್ರೆಸ್ ಮುಖಂಡರು

# ಕುಟುಂಬದಲ್ಲಿ ಶಾಂತಿ-ತಾಳ್ಮೆ ಇದ್ದರೆ ನೆಮ್ಮದಿ ಜೀವನ

## ಅರಸೀಕೆರೆಯ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಶ್ರೀ ಶಾಂತವೀರ ಸ್ವಾಮೀಜಿ



ಹರಪನಹಳ್ಳಿ, ಮೇ 11- ಪ್ರತಿ ಕುಟುಂಬದಲ್ಲಿ ಶಾಂತಿ- ತಾಳ್ಮೆ ಇದ್ದರೆ ಮಾತ್ರ ನೆಮ್ಮದಿ ಜೀವನ ಸಾಗಿಸಲು ಸಾಧ್ಯ ಎಂದು ಹೂವಿನಹಡಗಲಿ ಶ್ರೀ ಗವಿ ಸಿದ್ದೇಶ್ವರ ಸಂಸ್ಥಾನ ಮಠದ ಹಿರಿಯ ಶ್ರೀ ಶಾಂತವೀರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಅರಸೀಕೆರೆ ಗ್ರಾಮದ ಕೋಲ ಶಾಂತೇಶ್ವರ ಜನಕಲ್ಯಾಣ ಕೇಂದ್ರದಿಂದ ಬಸವ ಜಯಂತಿ ಪ್ರಯುಕ್ತ 40 ನೇ ವರ್ಷದ 34 ಜೋಡಿಗಳ ಸಾಮೂಹಿಕ ವಿವಾಹ ಹಮ್ಮಿಕೊಳ್ಳಲಾಗಿತ್ತು. ಅಲ್ಲದೇ ಬಸವ ಗುರುಕಿರಣ ಪ್ರಶಸ್ತಿ, ಕೋಲ ಶಾಂತೇಶ್ವರ ಪ್ರಶಸ್ತಿ, ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ, ಬಸವ ತೊಟ್ಟಿಲು ಕಾರ್ಯಕ್ರಮ ಹಾಗೂ ಸಂಗೀತ ಕಾರ್ಯಕ್ರಮ ಉದ್ಘಾಟಿಸಿ ಸ್ವಾಮೀಜಿ ಮಾತನಾಡಿದರು.

ಶ್ರೀ ಶಾಂತಲಿಂಗ ದೇಶೀಕೇಂದ್ರ ಮಹಾಸ್ವಾಮಿಗಳು ಕಾಯಕ ಯೋಗಿಗಳು, ಕ್ರಿಯಾಶೀಲರು, ಅಕ್ಷರ ದಾಸೋಹದ ಜೊತೆಗೆ ಅನ್ನ ದಾಸೋಹ ಸಹ ನೀಡುತ್ತಿದ್ದಾರೆ. ಶ್ರೀಮಠದಲ್ಲಿ ಶಾಂತಿ, ಪ್ರೀತಿ, ವಿಶ್ವಾಸ,ತಾಳ್ಮೆ, ನೆಮ್ಮದಿ ಎಲ್ಲವೂ ಸಿಗುತ್ತದೆ.ಇವರನ್ನು ಗುರುತಿಸಿ ನಮ್ಮ ಮಠದಿಂದ 'ಗವಿ ಸಿದ್ದೇಶ್ವರ'ಪ್ರಶಸ್ತಿಯನ್ನು ನೀಡಿದ್ದೇವೆ, ಇವರು ರೈತ ಸ್ವಾಮೀಜಿ, ಈ ಮಠವು ಬಸವ ಕಲ್ಯಾಣ ಮಠವಿದ್ದಂತೆ, ಇವರು ಕರ್ನಾಟಕದ ಅಪರೂಪದ ಸ್ವಾಮೀಜಿ ಎಂದು ಅವರು ಹೇಳಿದರು.

ಬಸವ ಗುರುಕಿರಣ ಪ್ರಶಸ್ತಿ ಸ್ವೀಕರಿಸಿದ ತಿಪ್ಪಾಯಿಕೊಪ್ಪ ಗುರು ಮೂಖಪ್ಪ ಶಿವಯೋಗಿಗಳ ಮಠದ ವಿರೂಪಾಕ್ಷ ಮಹಾಸ್ವಾಮಿಗಳು ಮಾತನಾಡಿ, 12ನೇ ಶತಮಾನದ ಬಸವಣ್ಣನ ಕಾಲದಲ್ಲಿ ಕಾಯಕವೇ ಪ್ರಧಾನವಾಗಿತ್ತು, ಜಾತಿಯನ್ನು ಹೊಡೆದೋಡಿಸಿ ಎಲ್ಲರೂ ಸಮಾನರು ಎಂದು ಸಾರಿದರು. ಎಲ್ಲರೂ ಇಷ್ಟಲಿಂಗ ಪೂಜೆ ಮಾಡಬೇಕು ಎಂದರು.

ಈ ಮಠದಲ್ಲಿ ಪ್ರತಿವರ್ಷ ಸಾಮೂಹಿಕ ವಿವಾಹಗಳು, ಕೊಟ್ಟೂರಿನ ರಥೋತ್ಸವದ ಪಾದಯಾತ್ರೆಗಳಿಗೆ ಅನ್ನ ದಾಸೋಹ, ಶೈಕ್ಷಣಿಕ ಪ್ರಗತಿ, ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗಿಯಾಗುವುದು, ಎಲ್ಲಾ ಸಮಾಜದ ವರನ್ನು ಸಮಾನತೆಯಿಂದ ಕಾಣುವುದು, ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಪಾಲಿಸಿಕೊಂಡು ಬಂದು ಮಠವನ್ನು ಅಭಿವೃದ್ಧಿ ಪಡಿಸಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕೋಲ ಶಾಂತೇಶ್ವರ ಸೇವಾ ಪ್ರಶಸ್ತಿಯನ್ನು ಕರ್ನಾಟಕ ರಾಜ್ಯ ಪ್ರಶಸ್ತಿ ಪುರಸ್ಕೃತ ಪ್ರಖ್ಯಾತ ಶಿಲ್ಪಿ ದಾವಣಗೆರೆಯ ಟಿ.ಶಿವಶಂಕರ್ ಅವರಿಗೆ ನೀಡಿ ಗೌರವಿಸಲಾಯಿತು.

ಕಲ್ಬುರ್ಗಿ ಬಸವ ವಿಶ್ವ ವಿದ್ಯಾಲಯದ ಪ್ರೊ.ರೇವಯ್ಯ ವಸ್ತ್ರದ್ ಮಠ್ ಅವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಅರಸೀಕೆರೆ ವಿರಕ್ತಮಠದ ಶ್ರೀ ಶಾಂತಲಿಂಗ ದೇಶೀಕೇಂದ್ರ ಮಹಾ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಮುಖಂಡರಾದ ವೈ.ಡಿ. ಅಣ್ಣಪ್ಪ, ಪ್ರಶಾಂತ್ ಪಾಟೀಲ್, ವೃಷಭೇಂದ್ರಯ್ಯ, ಇಟಗಳ್ಳಿ ಬಸವರಾಜ್, ಹೆಚ್. ಕೊಟ್ರೇಶ್, ಕೆ. ಬಸವರಾಜ್, ಡಾ.ಎಂ.ಸುರೇಶ್, ವೆಂಕಟೇಶ್, ಮರಿಯಪ್ಪ ಪೂಜಾರ್, ಎ. ಹೆಚ್. ನವೀನ್ ಮತ್ತಿತರರು ಹಾಜರಿದ್ದರು.

## ಮಲೇಬೆನ್ನೂರು : ವಿದ್ಯುತ್ ಇಲ್ಲ

ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವಿತರಣೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಮಲೇಬೆನ್ನೂರು ಬೆಸ್ಕಾಂ ಶಾಖಾಧಿಕಾರಿ ತಿಳಿಸಿದ್ದಾರೆ.

## ಹೊನ್ನಾಳಿಯ ಗ್ರಾಮೀಣ ಭಾಗದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ಬಿದರಗಡ್ಡೆ ಮತ್ತು ಸಾಸ್ವೇಹಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳಿಂದ ಸರಬರಾಜಾಗುವ ಹಳ್ಳಿಗಳಿಗೆ ಇಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

# ಇಬ್ಬರು ಹೆಂಡತಿಯರಿದ್ದರೆ 2 ಲಕ್ಷ: ಸ್ಪಷ್ಟನೆ ನೀಡಿದ ಕಾಂಗ್ರೆಸ್ ಅಭ್ಯರ್ಥಿ

**ಪ್ರಶ್ನೆಯೊಂದಕ್ಕೆ ವ್ಯಂಗ್ಯವಾಗಿ ಉತ್ತರಿಸಿದ್ದೆ ಎಂದ ಮಧ್ಯಪ್ರದೇಶದ ಅಭ್ಯರ್ಥಿ ಭುರಿಯಾ**

ಭೂಪಾಲ್, ಮೇ 11 - ಇಬ್ಬರು ಪತ್ನಿಯರಿದ್ದರೆ ಮಹಾಲಕ್ಷ್ಮಿ ಯೋಜನೆಯಡಿ 2 ಲಕ್ಷ ರೂ. ನೀಡುವುದಾಗಿ ಹೇಳಿದ್ದ ಕಾಂಗ್ರೆಸ್‌ನ ಮಧ್ಯಪ್ರದೇಶದ ರತ್ಲಾಮ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಕಾಂತಿಲಾಲ್ ಭುರಿಯಾ, ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿದ್ದಾರೆ.

ಮಹಾಲಕ್ಷ್ಮಿ ಯೋಜನೆಯಡಿ ಬಡ ಮಹಿಳೆಯರಿಗೆ ವರ್ಷಕ್ಕೆ 1 ಲಕ್ಷ ರೂ. ನೀಡುವುದಾಗಿ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ತಿಳಿಸಿದೆ. ಈ ಬಗ್ಗೆ ಗುರುವಾರ ಮಾತನಾಡಿದ್ದ ಭುರಿಯಾ, ಇಬ್ಬರು ಪತ್ನಿಯರಿದ್ದರೆ ವರ್ಷಕ್ಕೆ ಎರಡು ಲಕ್ಷ ರೂ. ದೊರೆಯಲಿದೆ ಎಂದಿದ್ದರು.

ಈ ಬಗ್ಗೆ ವಿಡಿಯೋ ಹೇಳಿಕೆ ಮೂಲಕ ಸ್ಪಷ್ಟನೆ ನೀಡಿರುವ ಅವರು, ಮಾಧ್ಯಮಗಳು ನನ್ನ ಹೇಳಿಕೆ ತಪ್ಪಾಗಿ ಬಿಂಬಿಸುತ್ತಿವೆ. ನಾನು ಪ್ರಶ್ನೆಯೊಂದಕ್ಕೆ ವ್ಯಂಗ್ಯವಾಗಿ ಉತ್ತರಿಸಿದ್ದೆ ಎಂದಿದ್ದಾರೆ.

ಸಭೆಯಲ್ಲಿದ್ದ ಬುಡಕಟ್ಟು ವ್ಯಕ್ತಿಯೊಬ್ಬರು ಇಬ್ಬರು ಪತ್ನಿಯರ ಕುರಿತು ಪ್ರಶ್ನಿಸಿದರು. ಬುಡಕಟ್ಟು ಸಮಾಜದಲ್ಲಿ ಎರಡು ಮದುವೆಯಾಗಲು ಅನುಮತಿ ಇದೆ. ಹೀಗಾಗಿ ನಾನು ವ್ಯಂಗ್ಯವಾಗಿ ಉತ್ತರಿಸಿದ್ದೆ ಎಂದು ಭುರಿಯಾ ಹೇಳಿದ್ದಾರೆ.

ರತ್ಲಾಮ್‌ನ ಸೈಲನಾ ಎಂಬಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಮಾತನಾಡಿದ್ದ ಅವರು, ನಮ್ಮ ಪ್ರಣಾಳಿಕೆಯಲ್ಲಿ ಪ್ರತಿಯೊಬ್ಬ ಮಹಿಳೆಗೆ 1 ಲಕ್ಷ ರೂ. ನೀಡುವುದಾಗಿ ತಿಳಿಸಲಾಗಿದೆ. ಅವರ ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡಲಾಗುವುದು. ಒಬ್ಬ ವ್ಯಕ್ತಿಗೆ ಇಬ್ಬರು ಪತ್ನಿಯರಿದ್ದರೆ, ಇಬ್ಬರೂ ಯೋಜನೆಯಡಿ ಬರಲಿದ್ದಾರೆ ಎಂದಿದ್ದರು.

ಈ ಹೇಳಿಕೆಗೆ ಬಿಜೆಪಿ ತೀವ್ರ ಪ್ರತಿಕ್ರಿಯೆ ನೀಡಿತ್ತು ಹಾಗೂ ಚುನಾವಣಾ ಆಯೋಗ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿತ್ತು.

## ನಗರದಲ್ಲಿಂದು ವಿಕಾಸ ತರಂಗಿಣಿಯಿಂದ ಮಜ್ಜಿಗೆ, ಅನ್ನ ಪ್ರಸಾದ

ವಿಕಾಸ ತರಂಗಿಣಿ ವತಿಯಿಂದ ಎರಡು ತಿಂಗಳಿನಿಂದ ಮಹಾನಗರ ಪಾಲಿಕೆ ಮುಂಭಾಗದ ಪಿ.ಬಿ. ರಸ್ತೆಯಲ್ಲಿ ನಡೆಯುತ್ತಿರುವ 29ನೇ ವರ್ಷದ ಉಚಿತ ಮಜ್ಜಿಗೆ ಸಮಾರೋಪದ ಅನ್ನಪ್ರಸಾದ ಕಾರ್ಯಕ್ರಮವು ಇಂದು ನಡೆಯಲಿದೆ ಎಂದು ವಿಕಾಸ ತರಂಗಿಣಿ ಸಂಚಾಲಕ ಬಿ. ಸತ್ಯನಾರಾಯಣ ಮೂರ್ತಿ ತಿಳಿಸಿದ್ದಾರೆ.

ದಿ. ಎಂ. ವೀರಭದ್ರರಾವ್ (ಬಾಲಾಜಿ ರೈಸ್ ಮಿಲ್) ಡಾ. ಎಂ.ವಿ.ವಿ. ಸತ್ಯನಾರಾಯಣ ಮತ್ತು ಸಹೋದರರು ಕುಟುಂಬದವರು, ದಿ. ಡಾ. ಕರಿಯಪ್ಪ, ಶ್ರೀಮತಿ ಕೌಸಲ್ಯಾದೇವಿ (ಶ್ರೀರಾಮಕೃಷ್ಣ ಆಸ್ಪತ್ರೆ) ಡಾ. ಮಹೇಶ್ ಮತ್ತು ಗಣೇಶಬಾಬು ಕುಟುಂದವರು, ಡಾ. ಎಂ. ಎಂ. ಶಿವಕುಮಾರ್ (ಇಎನ್‌ಟಿ ತಜ್ಞರು) ಮತ್ತು ಕುಟುಂಬದವರು, ಡಾ. ರವೀಂದ್ರನಾಥ್ (ದೃಷ್ಟಿ ಕಣ್ಣಿನ ಆಸ್ಪತ್ರೆ) ಮತ್ತು ಕುಟುಂಬದವರು, ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಟ್ರಸ್ಟ್, ಸತ್ಯನಾರಾಯಣ ರಾವ್ ಜಿ.ಎನ್. (ನೋಬಲ್ ಟಾರ್ಪಾಲಿಯನ್ ದಾವಣಗೆರೆ), ದಿ. ಆರ್.ಎಸ್. ನಾಗರಾಜ್ ದಿ. ಆರ್.ಎನ್. ಪದ್ಮ ಇವರ ಜ್ಞಾಪಕಾರ್ಥವಾಗಿ ನಾಗೇಂದ್ರ ಮತ್ತು ಕುಟುಂಬದವರು ಇಂದಿನ ದಾನಿಗಳಾಗಿದ್ದಾರೆ.

### ವೀರಭದ್ರಪ್ಪ ಸಕ್ರಪ್ಪನವರ್ ನಿಧನ



ದಾವಣಗೆರೆ ನಗರದ ಕೆ.ಬಿ. ಬಡಾವಣೆ, 4ನೇ ಕ್ರಾಸ್ ವಾಸಿ ವೀರಭದ್ರಪ್ಪ ಸಕ್ರಪ್ಪನವರ್ (72) ಅವರು ದಿನಾಂಕ 11.5.2024ರ ಶನಿವಾರ ಬೆಳಗಿನ ಜಾವ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು- ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 11.5.2024ರ ಶನಿವಾರ ಸಂಜೆ ರಾಣೇಬೆನ್ನೂರು ತಾಲ್ಲೂಕು ಕಮದೋಡು ಗ್ರಾಮದಲ್ಲಿ ನೆರವೇರಿತು.

### ಬೂಸ್ನೂರು ಗಿರಿಜಮ್ಮ ನಿಧನ



ದಾವಣಗೆರೆ ಕೆ.ಬಿ. ಬಡಾವಣೆ 6ನೇ ಕ್ರಾಸ್ (RSS ಕಾರ್ಯಾಲಯ) ಬಳಿ ವಾಸಿ ಬೂಸ್ನೂರು ಜಗದೀಶ್ ಇವರ ಧರ್ಮಪತ್ನಿ ಶ್ರೀಮತಿ ಗಿರಿಜಮ್ಮ ಬೂಸ್ನೂರು (66) ಅವರು 11.05.2024 ರ ಶನಿವಾರ ಲಿಂಗೈಕ್ಯರಾಗಿದ್ದಾರೆ. ಪತಿ, ಓರ್ವ ಪುತ್ರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 12.5.2024ರ ಭಾನುವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ ಗಾಂಧಿನಗರ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

### ಆಲೂರು ಗ್ರಾಮದ ಅಹಮ್ಮದ್ ಸಾಬ್ ನಿಧನ



ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ವಾಸಿ ಅಹಮ್ಮದ್ ಸಾಬ್ (85) ಇವರು ದಿನಾಂಕ 11.5.2024ರ ಶನಿವಾರ ಸಂಜೆ 4ಕ್ಕೆ ನಿಧನರಾದರು. ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.05.2024ರ ಭಾನುವಾರ 2ಕ್ಕೆ ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದ ಖಬರಸ್ತಾನದಲ್ಲಿ ನೆರವೇರಲಿದೆ.

## ನಗರ ಪಾಲಿಕೆ ಸದಸ್ಯ ಕಲ್ಲಳ್ಳಿ ನಾಗರಾಜ ನಿಧನಕ್ಕೆ ಎಸ್ಸೆಸ್- ಎಸ್ಸೆಸ್ಸೆಂ ಸಂತಾಪ

ದಾವಣಗೆರೆ, ಮೇ 11 - ಮಹಾನಗರ ಪಾಲಿಕೆಯ 43ನೇ ವಾರ್ಡ್‌ನ ಸದಸ್ಯ ಹಾಗೂ ನಾಯಕ ಸಮಾಜದ ಮುಖಂಡ ಕಲ್ಲಳ್ಳಿ ನಾಗರಾಜ್ ನಿಧನಕ್ಕೆ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಅವರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

## ಅರಕೆರೆಯಲ್ಲಿ ವಿದ್ಯುತ್ ತಗುಲಿ ಸಾವು

ಹೊನ್ನಾಳಿ, ಮೇ 11 - ತಾಲ್ಲೂಕಿನ ಅರಕೆರೆ ಎ.ಕೆ. ಕಾಲೋನಿಯ ದುರ್ಗಮ್ಮ ದೇವಸ್ಥಾನದ ವಿದ್ಯುತ್ ಅಲಂಕಾರ ವೇಳೆ ಇಂದು ಬೆಳಿಗ್ಗೆ ವಿದ್ಯುತ್ ಅವಘಡದಿಂದ ಎಲೆಕ್ಟ್ರೀಷಿಯನ್ ಕೆಲಸಗಾರ ಮೃತಪಟ್ಟಿದ್ದಾನೆ.

ಮೃತ ವ್ಯಕ್ತಿ ದಾವಣಗೆರೆ ಹತ್ತಿರದ ದೊಡ್ಡಬಾತಿ ವಾಸಿ ಅಶೋಕ್ (25) ಬಿನ್ ನಾಗಪ್ಪ ಎಂದು ತಿಳಿದು ಬಂದಿದ್ದು, ನಿನ್ನೆ ರಾತ್ರಿ 9 ರಿಂದ 10 ರವರೆಗೆ ದೇವಸ್ಥಾನಕ್ಕೆ ವಿದ್ಯುತ್ ಅಲಂಕಾರ ಮಾಡಿದ್ದು ಶುಕ್ರವಾರ ಬೆಳಿಗ್ಗೆ ವಿದ್ಯುತ್ ಅಲಂಕಾರ ಪರಿಶೀಲಿಸುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ.

## ಪಾಕ್ ಸಾಲ ಮರು ಪಾವತಿ ಸಾಮರ್ಥ್ಯಕ್ಕೆ ಐಎಂಎಫ್ ಅನುಮಾನ

ಇಸ್ಲಮಾಬಾದ್, ಮೇ 11 - ಸಾಲ ಮರು ಪಾವತಿಗೆ ಸಂಬಂಧಿಸಿದಂತೆ ಪಾಕಿಸ್ತಾನ ಪ್ರಮುಖ ಸವಾಲುಗಳನ್ನು ಎದುರಿಸುತ್ತಿದೆ. ಪಾಕಿಸ್ತಾನದ ಅಂತರರಾಷ್ಟ್ರೀಯ ಸಾಲ ಮರು ಪಾವತಿಸುವ ಸಾಮರ್ಥ್ಯದ ಬಗ್ಗೆ ಅನುಮಾನ ಇದೆ ಎಂದು ಐ.ಎಂ.ಎಫ್. ಹೇಳಿದೆ.

ಪಾಕಿಸ್ತಾನಕ್ಕೆ ಹೊಸ ಸಾಲದ ಪ್ಯಾಕೇಜ್ ನೀಡುವ ಸಂಬಂಧ ಐ.ಎಂ.ಎಫ್. (ಅಂತರರಾಷ್ಟ್ರೀಯ ಹಣಕಾಸು ನಿಧಿ) ತಂಡ ಪಾಕಿಸ್ತಾನಕ್ಕೆ ಬಂದಿದೆ. ಇದೇ ವೇಳೆ ಐ.ಎಂ. ಎಫ್.ನ ವರದಿ ಬಿಡುಗಡೆ ಮಾಡಲಾಗಿದೆ. ಪಾಕಿಸ್ತಾನದ ಸಾಲ ಮರು ಪಾವತಿ ಗಮನಾರ್ಹ ಅಪಾಯ ಹೊಂದಿದೆ. ಸಮಯಕ್ಕೆ ಸರಿಯಾಗಿ ನೀತಿಗಳನ್ನು ಜಾರಿಗೆ ತರುವುದು ಹಾಗೂ ಸಮಯೋಚಿತವಾಗಿ ವಿದೇಶಿ ಹಣಕಾಸು ಪಡೆಯುವುದರ ಮೇಲೆ ಸಾಲ ಮರು ಪಾವತಿ ಅವಲಂಬಿಸಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸುಧಾರಣೆ ವಿಳಂಬ, ಹೆಚ್ಚಿನ ಸಾರ್ವಜನಿಕ ಸಾಲ ಹಾಗೂ ಹೆಚ್ಚಿನ ಹಣಕಾಸು ಅಗತ್ಯಗಳ ಕಾರಣದಿಂದಾಗಿ ತೊಡಕುಗಳಿವೆ. ಹಣಕಾಸು ಹರಿವು ಕಡಿಮೆಯಾಗಿರುವುದು ಹಾಗೂ ಸಾಮಾಜಿಕ - ರಾಜಕೀಯ ಕಾರಣಗಳಿಂದ ನೀತಿಗಳ ಜಾರಿಗೆ ಸಮಸ್ಯೆಯಾಗಿದೆ. ಸಾಲ ಮರುಪಾವತಿ ಹಾಗೂ ಸಾಲ ನಿರ್ವಹಣೆಯ ಸಾಮರ್ಥ್ಯ ಕರಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಪಾಕಿಸ್ತಾನಕ್ಕೆ ಮುಂದಿನ ಐದು ವರ್ಷಗಳಲ್ಲಿ 123 ಶತಕೋಟಿ ಡಾಲರ್‌ಗಳ ಹಣಕಾಸು ಅಗತ್ಯವಿದೆ. 2024-25ರಲ್ಲಿ ಪಾಕಿಸ್ತಾನ 21 ಶತಕೋಟಿ ಡಾಲರ್‌ಗಳನ್ನು ಕೇಳುವ ಸಾಧ್ಯತೆ ಇದೆ ಎಂದು ಐ.ಎಂ.ಎಫ್. ತಿಳಿಸಿದೆ.


ಮಹಿಳಾ ಸೇವಾ ಸಮಾಜ (ರಿ.)

**ಮಹಿಳಾ ಸೇವಾ ಸಮಾಜ ಪ್ರಥಮ ದರ್ಜೆ (ಪದವಿ) ಮಹಿಳಾ ಕಾಲೇಜು**

(ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ, ವಿಜಯಪುರ ಇದರ ವ್ಯಾಪ್ತಿಗೆ ಒಳಪಟ್ಟು, ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)

ಅಶೋಕ ರಸ್ತೆ, ದಾವಣಗೆರೆ - 2. ಫೋನ್ : 08192 - 233010, 296684

**2024-25ನೇ ಶೈಕ್ಷಣಿಕ ವರ್ಷದ ಪದವಿ ತರಗತಿಗಳಿಗೆ ಪ್ರವೇಶ ಪ್ರಕಟಣೆ**



ವಿಷಯ ಸಂಯೋಜನೆಗಳು :

ಭಾಷಾ ವಿಷಯಗಳು : ಕನ್ನಡ, ಇಂಗ್ಲಿಷ್, ಹಿಂದಿ

ಐಚ್ಛಿಕ ವಿಷಯ ಸಂಯೋಜನೆಗಳು :

B.A. : ಇತಿಹಾಸ, ಸಮಾಜಶಾಸ್ತ್ರ (HS) ಅರ್ಥಶಾಸ್ತ್ರ, ರಾಜ್ಯಶಾಸ್ತ್ರ (EP) ಅರ್ಥಶಾಸ್ತ್ರ, ಇತಿಹಾಸ (EH)

B.Com : / B.C.A. : } ವಿಶ್ವವಿದ್ಯಾನಿಲಯ ನಿಗಧಿಪಡಿಸಿದ ವಿಷಯಗಳು

ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ

100 ಕ್ಕೆ 100 ರಷ್ಟು ಫಲಿತಾಂಶ

ಕಾಲೇಜಿನ ವೈಶಿಷ್ಟತೆ

♦ ಕಾಲೇಜ್ ನಗರದ ಮಧ್ಯಭಾಗದಲ್ಲಿದೆ. ಸುತ್ತಮುತ್ತ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಿಗೆ ಹತ್ತಿರದಲ್ಲಿರುತ್ತದೆ. ♦ ವಿಶಾಲವಾದ ಕಟ್ಟಡ ♦ ಸುಸಜ್ಜಿತವಾದ ಗ್ರಂಥಾಲಯ ♦ ಅನುಭವಿ ಉಪನ್ಯಾಸಕರಿಂದ ಬೋಧನೆ ♦ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ♦ ಹೆಣ್ಣು ಮಕ್ಕಳಿಗೆ ವಿಶೇಷವಾದ ಭದ್ರತೆ ಹಾಗೂ ವೈಯಕ್ತಿಕ ಗಮನ ♦ ಮಾಸಿಕ ಪರೀಕ್ಷೆಗಳ ಮೂಲಕ ಪ್ರಗತಿಯೆಡೆಗೆ.

ಪ್ರವೇಶದ ಅರ್ಜಿಗಳನ್ನು ಬೆಳಿಗ್ಗೆ 9-30 ರಿಂದ 3-00 ಗಂಟೆಯವರೆಗೆ ವಿತರಿಸಲಾಗುವುದು

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

9481867531, 9964456092, 9964005860

ಶ್ರೀಮತಿ ಕೆ.ಕೆ.ಸುಶೀಲಮ್ಮ ಅಧ್ಯಕ್ಷರು | ಶ್ರೀಮತಿ ಜಯ್ಯಮ್ಮ ನೀಲಗುಂದ ಕಾರ್ಯದರ್ಶಿ | ಶ್ರೀ ಪ್ರಸನ್ನ ರೆಡ್ಡಿ ಎಂ.ಹೆಚ್. ಪ್ರಾಚಾರ್ಯರು ಮೊ : 9481867531



**ಭಾವಪೂರ್ಣ ಶ್ರದ್ಧಾಂಜಲಿ**



ಜನ ಸಾಮಾನ್ಯರ ನಡುವೆ ಸಾಮಾನ್ಯರಾಗಿ, ಸರಳ ಸಜ್ಜನಿಕೆಯ ವ್ಯಕ್ತಿ ದಾವಣಗೆರೆ 43ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯರಾದ

**ಶ್ರೀ ಕಲ್ಲಳ್ಳಿ ನಾಗರಾಜ್ ಶಾಮನೂರು**

ಅವರು ದಿನಾಂಕ 12.5.2024ರಂದು ದೈವಾಧೀನರಾಗಿದ್ದು, ಇವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

**ಕಣ್ಣಾಳ್ ಅಂಜಿನಪ್ಪ**

ಜಿಲ್ಲಾ ಕಾಂಗ್ರೆಸ್ ಮುಖಂಡರು

ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಹೊಸಕುಂದುವಾಡ ಹಾಗೂ ಶಾಮನೂರು ಗ್ರಾಮಸ್ಥರು.



**ಬೇಕಾಗಿದ್ದಾರೆ**

ಫಾರ್ಮಾಸ್ಯೂಟಿಕಲ್ ಡಿಸ್ಟ್ರಿಬ್ಯೂಟರ್‌ನಲ್ಲಿ ಕೆಲಸ ಮಾಡಲು ಯುವಕ/ಯುವತಿಯರು

ಎಸ್‌ಎಸ್‌ಎಲ್‌ಸಿ/ಪಿಯುಸಿ ಪಾಸ್ ಆಗಿರುವವರು ಬೇಕಾಗಿದ್ದಾರೆ.

ಎಂ.ಸಿ.ಸಿ. "ಬಿ" ಬ್ಲಾಕ್, ದಾವಣಗೆರೆ.

ವಯೋಮಿತಿ : 18 ರಿಂದ 30 ವರ್ಷ

ಸಂಪರ್ಕಿಸಿ : ಫೋ. : 96069 04471



**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 12.5.2024ರಂದು ನಿಧನರಾದ ಮಹಾನಗರ ಪಾಲಿಕೆ ಸದಸ್ಯರೂ, ನಮ್ಮ ಆತ್ಮೀಯರೂ ಆದ


**ಶ್ರೀ ಕಲ್ಲಳ್ಳಿ ನಾಗರಾಜ್ ಶಾಮನೂರು**

ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

• ಜಿ.ಬಿ. ಸುರೇಶ್ • ಎಸ್.ಜಿ. ಹನುಮಂತಪ್ಪ
• ಜಿ.ಎನ್. ಸೋಮಶೇಖರ್ • ಗಿರಳ್ಳರ ಶ್ರೀನಿವಾಸ್
• ಸಣ್ಣಪ್ಪರ ಸಿದ್ದೇಶ್ • ಬಿಂದಪ್ಪ ಸಿದ್ದೇಶ್ • ಬಿ.ಹೆಚ್. ರಮೇಶ್
• ಬಿ.ಹೆಚ್. ವಿರೂಪಾಕ್ಷಿ • ಗಿರಿಯಜ್ಜಿ ರುದ್ರಪ್ಪ • ಚಿದಪ್ಪರ ರಾಜು





**ಭಾವಪೂರ್ಣ ಶ್ರದ್ಧಾಂಜಲಿ**

ದಿನಾಂಕ 12.5.2024ರಂದು ನಿಧನರಾದ 43ನೇ ವಾರ್ಡಿನ ಮಹಾನಗರ ಪಾಲಿಕೆ ಸದಸ್ಯರಾದ

**ಶ್ರೀ ಕಲ್ಲಳ್ಳಿ ನಾಗರಾಜ್ ಶಾಮನೂರು**

ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ
ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು
ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶಾಮನೂರು ಜಿ.ಹೆಚ್. ರಾಮಚಂದ್ರಪ್ಪ**

ಮಾಜಿ ಅಧ್ಯಕ್ಷರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ

• ಜಿ.ಹೆಚ್. ಲಿಂಗರಾಜು, ಶಾಮನೂರು • ಜಿ.ಬಿ.ಸುರೇಶ್, ಶಾಮನೂರು
• ಭರತ್ ಜಿ.ಎಸ್, ಶಾಮನೂರು • ರಿತೇಶ್, ಶಾಮನೂರು
• ಮೋಹನ್ ಕುಮಾರ್

**ಮೆ|| ಮಹಾನಂದಿ ಪೆಟ್ರೋಲ್ ಬಂಕ್**

ಶಾಮನೂರು ರೋಡ್, ದಾವಣಗೆರೆ. ಫೋನ್ : 222174, ಮೊಬೈಲ್ : 94484-07869


Eshwaramma Trust (R.)
ESHWARAMMA
HIGHER PRIMARY & HIGH SCHOOL
P.J Extension, Davangere - 02
S.S.L.C RESULT - 2024
100%RESULT
Heartiest Congratulations
SHREE BHUVAN B G 612 • 97.92%
BHOOMIKA S J 601 • 96.16%
KAVANASHREE B 601 • 96.16%
SRIDEVI H M 600 • 96.00%
PARVATHI S G 592 • 94.72%
VAISHNAVI K AVAJI 589 •94.24%
GANESH P K 587 • 93.92%
VAISHNAVI H S 586 • 93.76%
VARUN P 585 • 93.6%
VASUNDHARA HEGDE 576 • 92.16%
GANESH D R 575 • 92.00%
JYOTHIKA A S 562 •89.92%
VEERESH G V 562 • 89.92%
SUMAN PATIL 561• 89.76%
MITHUN M KANTHI 557 • 89.12%
PRAGNA M 555 • 88.8%
VARSHINI T 555 • 88.8%
KEERTHI M 548 • 87.68%
NAMITHA D R 548 • 87.68%
PRARTHNA G 548 • 87.68%
SINCHANA V G 547 • 87.52%
AJAY NAGESH 546 • 87.36%
BINDU R PAWAR 544 • 87.04%
ULLAS J 542 • 86.72%
YASHASWINI N RAIKAR 542 • 86.72%
MANOJ RAO NIKKAM S M 536 • 85.76%
SHREYA K B 535 • 85.6%
JEEVAN A S 533 • 85.28%
SUBHASH R L 529 • 84.64%
Distinction : 29
First Class: 38
Second Class: 11
School Grade: A
ಗುಣಾತ್ಮಕ ಫಲಿತಾಂಶ ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳು
ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಸದಸ್ಯರು - ಈಶ್ವರಮ್ಮ ಶಾಲಾ ಆಡಳಿತ ಮಂಡಳಿ
ಪ್ರಾಂಶುಪಾಲರು, ಉಪಪ್ರಾಂಶುಪಾಲರು ಹಾಗೂ ಗುರುವೃಂದ


D.R.R. Educational Association (R.) Dvg.
D.R.R. ENG. MED. HIGH SCHOOL
P.B. Road, DAVANGERE, Mob : 9845447268, 9844562854 E-mail : drrschool12017@gmail.com
CONGRATULATIONS TO S.S.L.C. - 2024
MERITORIOUS STUDENTS
CHIRAAG B.C. 590 (94.44%) EM
SHREEGOWRI 590 (94.44%) EM
SCHOOL RESULT 98%
VINUTHA N. 599 (95.84%) KM
ENGLISH MEDIUM
Pruthvik Yadav 574 - 91.84%
Tejashwini 569 - 91.20%
Varadaraj 560 - 89.60%
Jahnavi M. 546 - 87.36%
KANNADA MEDIUM
Vyshnavi A.T. 566 - 90.56%
Vidya R. 554 - 88.64%
Reethu K.B. 548 - 87.68%
Shankramma S. 530 - 84.80%
DISTINCTION - 11 FIRST CLASS - 42
SECOND CLASS - 26
D.R.R. Educational Trustees. Administrative Officer, Head Masters, Teaching Faculty Congratulates all the Successful Students & Their Parents who have brought Credit to our School.
SALIENT FEATURES
* School is Equipped with Smart Class.
* Computer Education to all Students.
* Moderate Fee Structure.
* Separate Library & Reading Room Facility.
* Individual & Cultural Activities are Encouraged.
* Well developed Physics, Chemistry & Biology labs.
* 10 Acres of spacious Play Ground with play items.
* Experienced, Well Qualified Dedicated Teaching Faculty.
ADMISSIONS ARE OPENED FOR 2024-25
PLAY Group, LKG, UKG, 1st Std. to 10th Std.
(Eng / Kan. Medium)


Sapthagiri Trust (R.)
SAPTHAGIRI VIDYALAYA
DAVANGERE
THE LAND OF OPPORTUNITY
SAPTHAGIRI VIDYALAYA
Chigateri Layout, Kunduwada Road, Davanagere-577006
HEARTY CONGRATULATIONS TO ALL THE SSLC TOPPERS 2024
DEEKSHA M KUMAR 600/625 96%
SANSKRUTHI R GADDI 583/625
CHINMAYI B P 576/625
SAHANA T A 574/625
VASHISTA H 569/625
SINCHANA P 568/625
MITHUN P B 563/625
PREETHAM R 600/625 96%
VENKATESH K 560/625
TANMAYI CHANDUKAR 558/625
MALLIKARJUN M T 556/625
RAMYA M 553/625
PUNITH R NAIK 553/625
ANUSHA B S 550/625
SHAM NAIK P 549/625
DEEPA A S 544/625
NEHA FATHIMA 542/625
PRIYADARSHINI K S 542/625
PRAVALIKA N 542/625
SHOBHA P 542/625
NIVEDITHA J N 536/625
BHAVANA R 534/625
NAVEEN KUMAR S B 524/625
SINCHANA S G 520/625
NAYANA M N 516/625
PRIYANKA P 516/625
MOHAN H V 510/625
KAVYA K H 509/625
GNANASHREE M 509/625
DHANUSHREE U 508/625
USHA T 503/625
VAIBHAV A SURVE 501/625
BHARATH R R 500/625
ADMISSIONS OPEN
PLAY GROUP, LKG, UKG and 1st STD TO 10th STD
Contact:
7406126006, 9620250067

## ಅಮ್ಮನ ಪ್ರೀತಿಯೇ ಸಂಜೀವಿನಿ



ಇಂದು ವಿಶ್ವ ತಾಯಂದಿರ ದಿನ

'ಅಮ್ಮ' ಎಂಬ ಎರಡಕ್ಷರದಿ,
ಅಡಗಿದೆ ಒಲವೆಂಬ
ಪ್ರೀತಿಯ ಬುನಾದಿ,
ನಿಸ್ವಾರ್ಥತೆಯ ಮಮತೆಯ
ಹಾದಿ,
ಜನನಿ- ನಿನಗೆ
ಶಿಖರಗಳಷ್ಟು ಶಾಂತಿ-
ನೆಮ್ಮದಿ...,

ತಾಯಿಯ ಮಡಿಲು,
ಅಗಣಿತ ವಾತ್ಸಲ್ಯಗಳ ಮೆಟ್ಟಿಲು,
ಕರುಳಿನ ರಕ್ತಸಂಬಂಧದ ನಂಟು,
ವರ್ಣಿಸಲಾಗದ ಪದಗಳ ನಿಘಂಟು.

ಪ್ರತಿ ಜೀವಿಯ ಅಂತರಾಳದಲ್ಲಿ- ಅಗ್ರಸ್ಥಾನ,
ಜನ್ಮದಾತೆಯ ಅಕ್ಕರೆಗೆ ಯಾರಿಲ್ಲ ಸಮಾನ,
ಮೇ ತಿಂಗಳ ಎರಡನೇಯ ಭಾನುವಾರ -
ವಿಶ್ವ ಅಮ್ಮಂದಿರ ದಿನ,
ನಮ್ಮನ್ನೆಲ್ಲ ಭುವಿಗೆ ಪರಿಚಯಿಸಿದ
ಅಮ್ಮಂದಿರಿಗೆಲ್ಲಾ ನಮನ.

ಅಮ್ಮನ ಮಾತು- ಅಮೃತ,
ಅಮ್ಮನ ಪ್ರೀತಿಯೇ - ಸಂಜೀವಿನಿ,
ಅವ್ವ- ನಿನ್ನ ಪ್ರೀತಿ,ಪ್ರೇಮ,
ವಾತ್ಸಲ್ಯ ಕ್ಕೆ ನೀನೆ ಸರಿಸಾಟಿ,
ಅಸಾಧ್ಯವಾದುದು -
ನಿನ್ನಯ ಪ್ರೀತಿಗೆ ಪೈಪೋಟಿ..,

ಉಸಿರು, ಹೆಸರು, ಬದುಕು ಕೊಡುವವಳು,
ನೋವಿನಲ್ಲೂ ನಗೆ ಹಂಚುವವಳು,
ಸಮವಾಗದು, ನಿನ್ನಯ ಕಾಳಜಿ -
ಪ್ರೀತಿಗೆ 'ಸನ್ಮಾನ''ತಾಯಿ' ಯನ್ನು
ಸೃಷ್ಟಿಸಿದ ಭಗವಂತನಿಗೆ ಶತಕೋಟಿ ನಮನ

**- ಡಾ।। ದೀಪ ಶ್ರೀ ಪ್ರಮೋದ್ ಗುಜ್ಜರ್**, ದಾವಣಗೆರೆ

## ತಾಯಿಯ ಹರಕೆ


ಓ ನನ್ನ ಕಂದ ಕೇಳು ನೀ ಮಾತೊಂದ
ಈ ಜಗದಲಿ ನೀನೇನಾಗಬೇಕೆಂಬುದ ತಿಳಿ
ಏನೇ ಆಗುವುದಾದರು
ಮೊದಲು ಮಾನವನಾಗು ಎಂಬ ಮಾತು ಅರಿ

ಈ ಜಗದ ಒಡೆಯ ರೈತನಾಗಬೇಕೆಂದರೆ,
ನೀನುಂಡು ಜಗದ ಹೊಟ್ಟೆ ತುಂಬಿಸುವುದು
ನಿನ್ನ ಗುರಿಯಾಗಬೇಕು
ರೋಗಗಳನ್ನು ಗುಣಪಡಿಸಲೆಂದೇ ವೈದ್ಯನಾಗು
ಮಕ್ಕಳಲ್ಲಿ ಜ್ಞಾನ ತುಂಬಲೆಂದೇ ಶಿಕ್ಷಕನಾಗು

ಸರ್ಕಾರಿ ಸವಲತ್ತು ಸಾಮಾನ್ಯರಿಗೆ
ತಲುಪಿಸಲು ಅಧಿಕಾರಿಯಾಗು
ಈ ಮಣ್ಣು ಸುಂದರವಾಗಿಸಲು ವಿಜ್ಞಾನಿಯಾಗು
ಜನರಲ್ಲಿ ಸರಿಯಾದ ತಿಳುವಳಿಕೆ
ಮೂಡಿಸಲು ಸಾಹಿತಿಯಾಗು
ರಾಷ್ಟ್ರವ ಸನ್ಮಾರ್ಗದಿ ನಡೆಸಲು ರಾಜಕಾರಣಿಯಾಗು
ಓ ನನ್ನ ಕಂದ ಕೇಳು ನೀ ಮಾತೊಂದ ...

**- ಬಸವರಾಜ ಕರುವಿನ, ಬಸವನಾಳು.**

# ನಗರದಲ್ಲಿ ಇಂದು ಭಕ್ತರ ಸಮಾವೇಶ



ಗದಗಿನ ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ಇವರು ಅರ್ಪಿಸುವ ಪಂಡಿತ್ ಪುಟ್ಟರಾಜ ಗುರುವರ್ಯರ ಅಭಿಮಾನಿ ಭಕ್ತರ ಸಮಾವೇಶವು ರಾಜ್ಯಮಟ್ಟದ ಕವಿಗೋಷ್ಠಿ, ಸಂಗೀತ ಮತ್ತು ನೃತ್ಯ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30 ರಿಂದ ಸಂಜೆ 7 ರವರೆಗೆ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

**ಉದ್ಘಾಟನೆ** : ಉದ್ಘಾಟನೆ : ವಿನಾಯಕ ಪಿ.ಬಿ. ಅಧ್ಯಕ್ಷತೆ : ಅಣಬೇರು ಮಂಜಣ್ಣ, ಮುಖ್ಯ ಅತಿಥಿಗಳು : ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಬಿ.ವಾಮದೇವಪ್ಪ, ಬಿ.ಕೆ. ಪರಮೇಶ್ವರಪ್ಪ, ಡಾ. ಕರಿಬಸಪ್ಪ ಜಾಲಿಮರ, ಉಪಸ್ಥಿತಿ : ಶಿವಬಸಯ್ಯ ಪಂ. ಚರಂತಿಮಠ, ಕವಿಗೋಷ್ಠಿ ಅಧ್ಯಕ್ಷತೆ : ಎಂ.ಪಿ.ಎಂ.ಕೊಟ್ರಯ್ಯ.

**ಸಮಾರೋಪ** : ಅಧ್ಯಕ್ಷತೆ : ಚನ್ನವೀರಸ್ವಾಮಿ ಹಿರೇಮಠ, ಪ್ರಶಸ್ತಿ ಪ್ರದಾನ : ಶ್ರೀಮತಿ ಗಾಯತ್ರಿ ಸಿದ್ದೇಶ್ವರ, ಮುಖ್ಯ ಅತಿಥಿಗಳು : ಅಥಣಿ ಎಸ್.ವೀರಣ್ಣ, ಶ್ರೀಮತಿ ಪ್ರಮೀಳಾ ನಟರಾಜ್, ಪ್ರಶಸ್ತಿ ಪ್ರದಾನ : (ಗುರುಸೇವಾ ರತ್ನ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು) ಎಂ.ಕೆ. ರೇವಣಸಿದ್ದಪ್ಪ, ಶಿವರಾಜ ಹ. ಉಜ್ಜನಿ, ಡಾ. ಗೀತಾ ಸುತ್ತಕೋಟಿ, ಶ್ರೀಮತಿ ಸೌಮ್ಯ ಸತೀಶ್ ಧಾರವಾಡ, ಶ್ರೀಮತಿ ಗಿರಿಜಾ ವಿ.ಮುಳುಗುಂದ, ಬಸವರಾಜ್ ಹಡಪದ, ಶ್ರೀಮತಿ ಸರೋಜಿನಿ ಕಾ ಮಾವಿನಮರ., (ಗುರು ಸಾಹಿತ್ಯ ಸೇವಾ ಶ್ರೀ ರಾಜ್ಯ ಪ್ರಶಸ್ತಿ ಪುರಸ್ಕೃತರು) ಶ್ರೀಮತಿ ಸುಧಾ ಮಂಜುನಾಥ್, ಶ್ರೀಮತಿ ಬಸವರಾಜೇಶ್ವರಿ ಶಿರೂರ, ರಾಜಲಿಂಗಪ್ಪ ಸಜ್ಜನ ಚಂಡರಕಿ, ಪ್ರಶಾಂತ ಸೊಕ್ಕೆ ಜಗಳೂರು, ಶ್ರೀಮತಿ ಅಕ್ಕಮಹಾದೇವಿ ಟಿ.ನೀರಲಗಿ, ವಚನ ಸಂಗೀತ : ಪಂ. ರೇವಣಸಿದ್ದಯ್ಯ ಹಿರೇಮಠ, ಡಾ.ಸುಮಾ ಹಡಪದ ಹಳಿಯಾಳ.

# ರಫಾ ಜನರ ಸ್ಥಳಾಂತರಕ್ಕೆ ಇಸ್ರೇಲ್ ಆದೇಶ : ಉಲ್ಬಣಿಸಿದ ಜನರ ಸಮಸ್ಯೆ

ರಫಾ, ಮೇ 11 – ಗಾಜಾದ ದಕ್ಷಿಣ ನಗರದ ರಫಾದಿಂದ ಜನರು ಸ್ಥಳಾಂತರಗೊಳ್ಳಬೇಕು ಎಂದು ಇಸ್ರೇಲ್ ಆದೇಶಿಸಿದೆ. ಇದರಿಂದಾಗಿ ಸಾವಿರಾರು ಜನರು ಬೇರೆಡೆ ತೆರಳಬೇಕಿದೆ. ಉತ್ತರ ಗಾಜಾದಲ್ಲಿ ಹಮಾಸ್ ಮರು ಸಂಘಟನೆಯಾಗುತ್ತಿದ್ದು, ಅಲ್ಲೂ ಕಾರ್ಯಾಚರಣೆ ನಡೆಸಲಾಗುವುದು ಎಂದು ಇಸ್ರೇಲ್ ಹೇಳಿದೆ.

ರಫಾದ ಜನರನ್ನು ಹೆಚ್ಚು ಜನಸಂಖ್ಯೆ ಹೊಂದಿರುವ ಮಧ್ಯ ಭಾಗದ ಕಡೆ ರವಾನಿಸಲಾಗುತ್ತಿದೆ. ರಫಾದಲ್ಲಿ ಇಸ್ರೇಲ್ ಕಾರ್ಯಾಚರಣೆಗಾಗಿ ಶಸ್ತ್ರಗಳನ್ನು ಒದಗಿಸುವುದಿಲ್ಲ ಎಂದು ಅಮೆರಿಕ ಈಗಾಗಲೇ ತಿಳಿಸಿದೆ. ಇಸ್ರೇಲ್ ಗಡಿಯಲ್ಲಿರುವ ರಫಾ ಮೇಲೆ ದಾಳಿ ನಡೆಸಿದರೆ ಮಾನವೀಯ ಕಾರ್ಯಾಚರಣೆಗಳಿಗೆ ತೊಡಕಾಗಲಿದೆ ಹಾಗೂ ಸಾವುಗಳ ಸಂಖ್ಯೆ ಹೆಚ್ಚಾಗಲಿದೆ ಎಂದು ವಿಶ್ವಸಂಸ್ಥೆ ಸೇರಿದಂತೆ ಹಲವು ಸಂಘಟನೆಗಳು ಈಗಾಗಲೇ ಹೇಳಿವೆ.

ಸುಮಾರು 7 ಲಕ್ಷ ಜನರು ರಫಾದಲ್ಲಿದ್ದಾರೆ. ಈ ಹಿಂದೆ ಉತ್ತರ ಭಾಗದಲ್ಲಿ ಇಸ್ರೇಲ್ ಕಾರ್ಯಾಚರಣೆ ನಡೆಸಿದ್ದರಿಂದ, ಸಾಕಷ್ಟು ಜನರು ರಫಾ ಕಡೆ ಬಂದಿದ್ದರು.

ಜನರನ್ನು ಹಲವು ಬಾರಿ ಸ್ಥಳಾಂತರಿಸಲಾಗಿದೆ. ಸಂಘರ್ಷದ ಪ್ರದೇಶಗಳಿಂದ ಬಂದಿದ್ದ ಹಲವರು, ಅರೆ ನಾಶಗೊಂಡಿರುವ ಖಾನ್ ಯೂನಿಸ್ ನಗರದಲ್ಲಿ ಟೆಂಟ್‌ಗಳಲ್ಲಿ ನೆಲೆಸಿದ್ದಾರೆ. ಇದರಿಂದಾಗಿ ಡೀರ್ ಅಲ್ - ಬಲಾ ನಗರದಲ್ಲಿರುವ ಸೌಲಭ್ಯಗಳ ಮೇಲೂ ಒತ್ತಡ ಹೆಚ್ಚಿದೆ.

# 'ಬೈಬಲ್' ಬಳಕೆ : ಕರೀನಾಗೆ ನೋಟಿಸ್

**(1ನೇ ಪುಟದಿಂದ)** ನ್ಯಾಯಮೂರ್ತಿ ಜಿ. ಎಸ್. ಅಹ್ಲುವಾಲಿಯಾ ಅವರ ಏಕಸದಸ್ಯ ಪೀಠದ ಎದುರು ವಕೀಲ ಕ್ರಿಸ್ಟೋಫರ್ ಆಂಥೋನಿ ಅವರು ಅರ್ಜಿ ದಾಖಲಿಸಿದ್ದರು.

ಪುಸ್ತಕದ ಸಹ ಲೇಖಕಿ ಅದಿತಿ ಷಾ ಭಿಮ್ಜಾಯಿನಿ, ಅಮೆಜಾನ್ ಆನ್‌ಲೈನ್ ಶಾಪಿಂಗ್, ಪ್ರಕಾಶಕ ಜಗ್ಗರ್‌ನಾಟ್ ಬುಕ್ಸ್, ರಾಜ್ಯ ಸರ್ಕಾರ, ಜಬಲ್ಪುರ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಆಮಿಟ್ ಪೊಲೀಸ್ ಠಾಣಾಧಿಕಾರಿಗಳಿಗೆ ನೋಟಿಸ್ ಕಳಿಸಲಾಗಿದೆ. ಆಗಸ್ಟ್ 2021ರಲ್ಲಿ ಈ ಪುಸ್ತಕವನ್ನು ಬಿಡುಗಡೆ ಮಾಡಲಾಗಿತ್ತು. ಫೆಬ್ರವರಿ 26, 2022ರಂದು ಕೆಳ ನ್ಯಾಯಾಲಯ ಈ ಕುರಿತ ಅರ್ಜಿಯನ್ನು ತಳ್ಳಿ ಹಾಕಿತ್ತು. ನಂತರ ಆಂಥೋನಿ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

## ಅಭ್ಯರ್ಥಿಗಳ ಪಟ್ಟಿ ಪ್ರಕಟ

**(1ನೇ ಪುಟದಿಂದ)** ಶಿಕ್ಷಕರ ಕ್ಷೇತ್ರದಿಂದ ವೈ.ಎ.ನಾರಾಯಣ ಸ್ವಾಮಿ ಮತ್ತು ವಿಧಾನಪರಿಷತ್‌ನ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಇ.ಸಿ.ನಿಂಗ ರಾಜು ಅವರನ್ನು ಕಣಕ್ಕಳಿಸಿದೆ. ನೈಋತ್ಯ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿಯನ್ನು ಜೆಡಿಎಸ್‌ಗೆ ಬಿಟ್ಟು ಕೊಡಲಾಗಿದ್ದು, ಇನ್ನೂ ಅಭ್ಯರ್ಥಿ ನಿರ್ಧಾರವಾಗಿಲ್ಲ.

# ಜಿಲ್ಲಾ ರಾಜಕೀಯದಲ್ಲಿ ಬದಲಾವಣೆ ಗಾಳಿ

**ದಾವಣಗೆರೆಯಲ್ಲಿ ಇನ್ನು ಮೂರು ತಿಂಗಳಿನಲ್ಲಿ ಸುಸಜ್ಜಿತವಾದ ಐಎಎಸ್ ಸಂಸ್ಥೆ ಆರಂಭಿಸುತ್ತೇನೆ. ಈ ಮೂಲಕ ಬಡವರ ಮಕ್ಕಳೂ ಉನ್ನತ ಅಧಿಕಾರಿಗಳಾಗಬಹುದು ಎಂಬುದನ್ನು ತೋರಿಸಿಕೊಡುತ್ತೇನೆ. ನಾನು ಓಡಾಡಲು ಶುರು ಮಾಡಿದ ಮೇಲೆ ಅಧಿಕಾರದಲ್ಲಿದ್ದವರು ಓಡಾಡಲು ಶುರು ಮಾಡಿದ್ದಾರೆ. ಜಿಲ್ಲೆಯ ಹಳ್ಳಿಗಳಿಗೆ ಭೇಟಿ ನೀಡಿದ ಮೇಲೆ ಅವರೂ ಬರುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ನಾನು ಯಾರ ವಿರುದ್ಧವೂ ಇಲ್ಲ. ಯಾವ ಪಕ್ಷಗಳ ದ್ವೇಷಿಯೂ ಅಲ್ಲ. ಗ್ರಾಮಗಳು ಅಭಿವೃದ್ಧಿಯಾಗಬೇಕು, ಜನಸೇವೆ ಮಾಡಬೇಕೆಂಬ ಕಲ್ಪನೆ ನನ್ನದು. ದ್ವೇಷ ರಹಿತ, ದುಡ್ಡು ರಹಿತ ರಾಜಕಾರಣ ಮಾಡೋಣ.**

**-ಜಿ. ಬಿ. ವಿನಯ್ ಕುಮಾರ್**, ಪಕ್ಷೇತರ ಅಭ್ಯರ್ಥಿ

**(1ನೇ ಪುಟದಿಂದ)** ಅವರು, ಮುಂಬರುವ ದಿನಗಳಲ್ಲಿ ಪ್ರತಿ ಚುನಾವಣೆಯಲ್ಲಿ ಸ್ಪರ್ಧಿಸೋಣ. ದುಡ್ಡಿನ ಬಲದಿಂದಲ್ಲ. ನಿಮ್ಮ ಗೆಲುವಿಗೆ ನಾನು ಹೋರಾಡುತ್ತೇನೆ, ದುಡಿಯುತ್ತೇನೆ. ಸ್ವಾರ್ಥಿಗಳು, ರಾಕ್ಷಸೀ ಪ್ರವೃತ್ತಿ ಇದ್ದವರು ನನ್ನ ಜೊತೆಗಿದ್ದು ಹೋಗಿದ್ದಾರೆ. ಉಳಿದವರೆಲ್ಲರೂ ಸ್ವಾಭಿಮಾನಿಗಳೇ. ಹೊಸ ರಾಜಕೀಯ ವ್ಯವಸ್ಥೆ ಸೃಷ್ಟಿಸೋಣ. ಅಭಿವೃದ್ಧಿ ರಾಜಕಾರಣ ಮಾಡೋಣ ಎಂದು ಹೇಳಿದರು.

ಇಂದಿನ ದಿನಗಳಲ್ಲಿ ರಾಜಕಾರಣಿಗಳು, ಊರಿನ ಜನರ ಅಭಿವೃದ್ಧಿ, ಮಕ್ಕಳ ಶಿಕ್ಷಣದ ಬಗ್ಗೆ ಚರ್ಚೆಯಾಗುತ್ತಿಲ್ಲ. ಪೆನ್ ಡ್ರೈವ್, ಯಾರದ್ದೋ ಬಂಧನ, ಬಿಡುಗಡೆ ಇಂಥ ವಿಚಾರಗಳೇ ರಾಜಕಾರಣದಲ್ಲಿ ಹೆಚ್ಚು ಚರ್ಚೆಯಾಗುತ್ತಿವೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ವಿದ್ಯಾಭ್ಯಾಸ ಮುಗಿಸಿದ ನಿರುದ್ಯೋಗಿ ಯುವಕರಿಗೆ, ಶಿಕ್ಷಣ ವಂಚಿತ ಮಕ್ಕಳಿಗೆ ಸಹಾಯ ಮಾಡುವ ಕಳಕಳಿ ಬರಲ್ಲ. ಕುಟುಂಬಕ್ಕೆ ಟಿಕೆಟ್ ತಂದು ಹೊಸ ಯೋಜನೆ ಘೋಷಣೆ ಈಗ ಮಾಡುತ್ತಿದ್ದಾರೆ. ನೀರಾವರಿ ಯೋಜನೆ, ಪ್ರತಿ ಗ್ರಾಮಗಳಿಗೆ ಆಂಬ್ಯುಲೆನ್ಸ್ ಕೊಡಿಸ್ತೇವೆ ಎಂಬುದೂ ಸೇರಿದಂತೆ ಹಲವು ಭರವಸೆ ನೀಡಿದ್ದಾರೆ. 30 ವರ್ಷ ಅಧಿಕಾರ ನಡೆಸಿದವರು ಅಧಿಕಾರ ಇದ್ದಾಗ ಯಾಕೆ ಮಾಡಲಿಲ್ಲ. ಕೇವಲ ಪ್ರತಿಷ್ಠೆಗಾಗಿ ಅಧಿಕಾರ ಬೇಕು. ಕಾಂಗ್ರೆಸ್ ಹಾಗೂ ಬಿಜೆಪಿಗೆ ಅಭಿವೃದ್ಧಿ ಬೇಕಿಲ್ಲ ಎಂದು ವಾಗ್ದಾಳಿ ನಡೆಸಿದರು.

ದಾವಣಗೆರೆ ಕ್ಷೇತ್ರದಲ್ಲಿ ಭಯದ ವಾತಾವರಣ ಇರುವುದು ನಿಜ. ನನ್ನ ಜೊತೆಗೆ ಇದ್ದವರು ಹೋದದ್ದೇ ಇದಕ್ಕೆ ಸಾಕ್ಷಿ. ನನ್ನ ಜೊತೆಗಿದ್ದವರನ್ನು ಸೈಲೆಂಟ್ ಮಾಡಿಸಿದ್ದಾರೆ. ನನ್ನ ಮನೆಗೆ ಯಾರು ಬರುತ್ತಾರೆ, ಹೋಗುತ್ತಾರೆ ಎಂದು ಗಮನಿಸಿದ್ದಾರೆ. ಸೈಲೆಂಟ್ ಸಪೋರ್ಟ್ ಮಾಡುವವರನ್ನು ಹೆದರಿಸಿದ್ದಾರೆ. ಇದು ಪ್ರಜಾಪ್ರಭುತ್ವ ಅಲ್ಲ. ಸಂವಿಧಾನಕ್ಕೆ ವಿರುದ್ದ ನಡೆವ ಆಶಯ ಎಂದರು.

ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಅವರ ಪತ್ನಿ ಡಾ. ಪ್ರಭಾ ಮಲ್ಲಿಕಾರ್ಜುನ್, ಬಿಜೆಪಿ ಸಂಸದ ಜಿ. ಎಂ. ಸಿದ್ದೇಶ್ವರ, ಅವರ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರು ನನ್ನ ಜೊತೆ ಉತ್ತಮವಾಗಿ ಮಾತನಾಡಿದ್ದಾರೆ. ಅವರ ಬಗ್ಗೆ ನನಗೇನೂ ದ್ವೇಷ ಇಲ್ಲ. ಅವರಿಗೂ ಸಹ ಇಲ್ಲ. ಗೌರವಯುತವಾಗಿ ಮಾತನಾಡಿದ್ದಾರೆ. ಸಚಿವರೊಂದಿಗೆ ಎರಡು ಗಂಟೆಗಳ ಕಾಲ ಚರ್ಚೆ ನಡೆಸಿದಾಗಲೂ ವಿನಯವಾಗಿ ಮಾತನಾಡಿದ್ದಾರೆ. ಅವರ ವಿರುದ್ದ ದ್ವೇಷದ ರಾಜಕಾರಣ ಮಾಡುತ್ತಿಲ್ಲ. ನನ್ನದೇನಿದ್ದರೂ ಸ್ವಾಭಿಮಾನಿ ಹೋರಾಟ ಎಂದು ವಿನಯ್ ಕುಮಾರ್ ತಿಳಿಸಿದರು.

ಯುವ ಮುಖಂಡ ಶರತ್ ಕುಮಾರ್, ರಂಗಸ್ವಾಮಿ, ಅಹಿಂದ ಮುಖಂಡರಾದ ಕೃಷ್ಣಪ್ಪ, ಮಂಜಪ್ಪ, ರಾಜು ಮೌರ್ಯ, ಷಣ್ಮುಖಪ್ಪ, ಮುತ್ತಿಗೆ ಜಂಬಣ್ಣ, ಗೌರಿಪುರ ನಾಗರಾಜ್, ರವಿ, ಸೇರಿದಂತೆ ಹರಪನಹಳ್ಳಿ, ಜಗಳೂರು, ಚನ್ನಗಿರಿ, ಹೊನ್ನಾಳಿ, ಮಾಯಕೊಂಡ, ದಾವಣಗೆರೆಯಿಂದ ಅನೇಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## 18 ಸ್ಥಾನ ಗೆದ್ದರೆ ಸಂಭ್ರಮಾಚರಣೆ

**(1ನೇ ಪುಟದಿಂದ)** ಸಮಾವೇಶಗಳನ್ನು ನಡೆಸುವ ಉದ್ದೇಶ ಇದೆ. ತಮ್ಮ ಮೊದಲ ವರ್ಷದಲ್ಲಿ ಮಾಡಿರುವ ಸಾಧನೆಗಳ ಕಿರುಹೊತ್ತಿಗೆ ಜೊತೆಗೆ ಅವುಗಳ ಅನುಷ್ಠಾನ, ಎಲ್ಲದಕ್ಕೂ ಮಿಗಿಲಾಗಿ ಗ್ಯಾರಂಟಿ ಮೂಲಕ ಬಡವರನ್ನು ಮೇಲ್ದರ್ಜೆಗೆ ಏರಿಸಿರುವ ಅಂಕಿ-ಅಂಶಗಳನ್ನು ಬಹಿರಂಗ ಪಡಿಸುವುದು ಸರ್ಕಾರದ ಉದ್ದೇಶವಾಗಿದೆ. ವಿಭಾಗೀಯ ಮಟ್ಟದ ಸಮಾವೇಶದ ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವರುಗಳು ಆಯಾ ಜಿಲ್ಲೆಗಳಲ್ಲಿ ಸಾಧನಾ-ಸಂಭ್ರಮಗಳನ್ನು ಜಿಲ್ಲಾಡಳಿತದ ವತಿಯಿಂದಲೇ ಆಚರಿಸಲು ಯೋಜಿಸಲಾಗಿದೆ.

## ಕಣ್ವಕುಪ್ಪೆ ಶ್ರೀಗಳ ತಾಯಿ ನಿಧನ

**(1ನೇ ಪುಟದಿಂದ)** ಬಂಧುಗಳನ್ನು ಅಗಲಿದ್ದು, ನಾಳೆ ದಿನಾಂಕ 12ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಶಿಕಾರಿಪುರ ತಾಲ್ಲೂಕಿನ ಚಿಕ್ಕಮಾಗಡಿ ಗ್ರಾಮದ ಮಠದ ಜಮೀನಿನಲ್ಲಿ ಕ್ರಿಯಾ ಸಮಾಧಿ ಮಾಡಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ. ಶ್ರೀಮತಿ ಶಾರದಮ್ಮ ನಿಧನಕ್ಕೆ ದಾವಣಗೆರೆ ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್.ರಾಜಶೇಖರ್ ಸಂತಾಪ ವ್ಯಕ್ತಪಡಿಸಿದ್ದಾರೆ.

## ನಗರದಲ್ಲಿ ಇಂದು ಶ್ರೀ ಶಂಕರ ಭಗವತ್ಪಾದರ ಜಯಂತ್ಯೋತ್ಸವ



ಶ್ರೀ ಶಂಕರ ಸೇವಾ ಸಂಘದಿಂದ ಶ್ರೀ ಶಂಕರ ಭಗವತ್ಪಾದರ ಜಯಂತಿ ಕಾರ್ಯಕ್ರಮವು ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಶನಿವಾರ ಆರಂಭಗೊಂಡಿದ್ದು, ಇಂದಿನ ಕಾರ್ಯಕ್ರಮದ ವಿವರ ಹೀಗಿದೆ. ಇಂದು ಶ್ರೀ ಶಂಕರ ಭಗವತ್ಪಾದರ ಜಯಂತಿ ಅಂಗವಾಗಿ ಪಲ್ಲಕ್ಕಿ ಉತ್ಸವ ಬೆಳಗ್ಗೆ 9 ಗಂಟೆಗೆ ಶ್ರೀ ಶಾರದಾಂಬ ದೇವಸ್ಥಾನ ದಿಂದ ಪ್ರಾರಂಭವಾಗಲಿದೆ. ನಂತರ ಮಧ್ಯಾಹ್ನ 12.30ಕ್ಕೆ ಅನ್ನ ಸಂಪರ್ಪಣೆ. 5.30ಕ್ಕೆ ಶ್ರೀರಾಮ ಭಜನಾ ಮಂಡಳಿಯವರಿಂದ ಭಜನೆ ಮತ್ತು ಭಕ್ತಿ ಸಂಗೀತ ಕಾರ್ಯಕ್ರಮವಿದೆ ಎಂದು ಸಂಘದ ಅಧ್ಯಕ್ಷ ಡಾ. ಬಿ.ಟಿ. ಅಚ್ಯುತ್ ಮತ್ತು ಕಾರ್ಯದರ್ಶಿ ಶ್ರೀನಿವಾಸ್ ಜೋಶಿ ತಿಳಿಸಿದ್ದಾರೆ.

# PUBLIC NOTICE
## ORIGINAL TITLE DEEDS MISSING

Notice is hereby given that the Original Title deeds related to house property bearing sy No.9/1A1/AP/, Site No.9, Property No.446 Kathe No.986 Bharmasagara Village, Chitradurga Dist. Measuring East to West 40 feet and North to South 60 Feet Totaling 2400 Sqft and Bounded by: East: Site No.8,West By :site No.Site No.10, North by : 20 feet width Road and South by 20 Feet Road. The document Executed on 30/05/1998 in the name of B S Gopal and registered as document No.564/98-99 in Sub Registrar Office, Chitradurga is found missing/untraceable at branch office of Davangere, Indian Overseas Bank, Davangere in This connection,a police complienthas been lodged on 11.05.2024 and lost Report No. 1047784/2024. If anybody is in possession of the Original Sale deed document they are requested to hand over the same to the following address:

**BRANCH MANAGER**
**Indian Overseas Bank**
**Davangere Branch,**
**Subhas Road, Mandipet**
**DAVANGERE-577001.**


# ಭಾರತದ ನಂ.1 ಬ್ಯಾಂಕ್ ಕಡೆಯಿಂದ ಸುವರ್ಣಾವಕಾಶ

ದಾವಣಗೆರೆ ನಗರ ಮತ್ತು ಸುತ್ತ ಮುತ್ತಲಿನ ಗ್ರಾಮದ ಸಾರ್ವಜನಿಕರಿಗೆ, ವಿಶೇಷವಾಗಿ ಎಲ್ಲಾ ಹಿರಿಯ ನಾಗರೀಕರು, ನಿವೃತ್ತ ನೌಕರರು, ವಿ.ಆರ್.ಎಸ್. ನಿವೃತ್ತ ಉಪಾಧ್ಯಾಯರು, ನಿವೃತ್ತ ಸೈನಿಕರು ಹಾಗೂ ನಿವೃತ್ತ ಬ್ಯಾಂಕ್ ನೌಕರರು, ಪಿಂಚಣಿದಾರರು, ವ್ಯಾಪಾರಸ್ಥರು, ಗೃಹಿಣಿಯರು, ಪಿಗ್ಮಿ ಏಜೆಂಟರ್, ಸಂಘದ ಮಹಿಳೆಯರು, ಗೃಹೋಪಯೋಗಿ ಉತ್ಪನ್ನಗಳ ಮಾರಾಟಗಾರರುಗಳಿಗೆ ವೃತ್ತಿ ರೂಪಿಸಿಕೊಳ್ಳಲು ಸುವರ್ಣಾವಕಾಶ, ವಯೋಮಿತಿ 30 ರಿಂದ 80 ವರ್ಷ, ವಿದ್ಯಾರ್ಹತೆ 10ನೇ ತರಗತಿ ಮತ್ತು ಮೇಲ್ಪಟ್ಟು.

**ಒಂದು ಅವಕಾಶ ಹಲವು ಪ್ರಯೋಜನಗಳು :**

*** ಸ್ಥಿರ ಸಂಬಳ * ಮನೆಯಿಂದ ಕೆಲಸ * ಅರೆಕಾಲಿಕ/ಪೂರ್ಣ ಸಮಯದ ಕೆಲಸ * ಶೂನ್ಯ ಹೂಡಿಕೆ ವೇರಿಯೇಬಲ್ ಭತ್ಯೆ *ಸನ್ಮಾನ ಮತ್ತು ಪುರಸ್ಕಾರ * ಪ್ರಾವಿಡೆಂಟ್ ಫಂಡ್ * ಇಎಸ್ಐ ಸೌಲಭ್ಯ * ಗ್ರ್ಯಾಚುಟಿ ***

**ಭಾರತದ ಅತ್ಯಂತ ಮೌಲ್ಯಯುತ ಬಹುರಾಷ್ಟ್ರೀಯ ಕಂಪನಿ**

**ಅಗತ್ಯವಿರುವ ದಾಖಲೆಗಳು :**

**ಪಾನ್ ಕಾರ್ಡ್, ಆಧಾರ್ ಕಾರ್ಡ್, ಶಿಕ್ಷಣ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಬುಕ್, ಮುಖಪುಟ, ಫೋಟೋ, ಮೊಬೈಲ್ ಸಂಖ್ಯೆ ಹಾಗೂ ಸಣ್ಣ ಪೇಪರ್‌ನಲ್ಲಿ ಸಹಿ ಮಾದರಿ.**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :**

**ಫೋ. : 63606 95026, 90352 60524**


# ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಶ್ರೀ ಎನ್.ಆರ್. ಲಕ್ಷ್ಮೀಕಾಂತ್ ಬಿನ್, ನೀಲಿ ರಂಗಪ್ಪ, ವಯಸ್ಸು : ಸುಮಾರು 61 ವರ್ಷ, ವಾಸ: #25, 1ನೇ ಮೇನ್, 7ನೇ ಕ್ರಾಸ್, ಎಲ್.ಡಿ. ಬ್ಲಾಕ್, ಗಂಗಾನಗರ, ಬೆಂಗಳೂರು, ಇವರ ಜನರಲ್ ಪವರ್ ಆಫ್ ಅಟಾರ್ನಿ ಹೋಲ್ಡರ್ ಆದ ಶ್ರೀ ಲಿಂಗರಾಜ್ ನಾಯ್ಕ ಹೆಚ್.ಕೆ. ಬಿನ್. ಕೃಷ್ಣ ನಾಯ್ಕ, ವಯಸ್ಸು : ಸುಮಾರು 45 ವರ್ಷ, ವಾಸ: ಹೊನ್ನನಾಯ್ಕನಹಳ್ಳಿ ಗ್ರಾಮ, ನರಗನಹಳ್ಳಿ ಅಂಚೆ, ದಾವಣಗೆರೆ ತಾಲ್ಲೂಕು & ಜಿಲ್ಲೆ (ವಾದಿಗಳು) ಇವರುಗಳು ನೀಡಿದ ಮಾಹಿತಿ ಹಾಗೂ ದಾಖಲೆಗಳ ಆಧಾರದ ಮೇಲೆ ನೀಡುತ್ತಿರುವ ಸಾರ್ವಜನಿಕ ಪ್ರಕಟಣೆ ಏನೆಂದರೆ, ಈ ಮೇಲ್ಕಂಡ ನನ್ನ ಕಕ್ಷಿದಾರರುಗಳಾದ ಇವರು ಈ ಹಿಂದೆ (1) ಶ್ರೀ ಬಿ.ಟಿ. ಷಡಕಪ್ಪ ಬಿನ್, ಲೇಟ್ ಸಿದ್ದಪ್ಪ, (2) ಶ್ರೀಮತಿ ಸರೋಜಮ್ಮ ಕೋಂ, ಬಿ.ಟಿ. ಷಡಕಪ್ಪ (3) ಶ್ರೀ ಬಿ.ಎಸ್. ಸಿದ್ದೇಶ್ ಬಿನ್, ಬಿ.ಟಿ. ಷಡಕಪ್ಪ (4) ಟಿ.ಎಸ್. ಚೈತ್ರ ತಂದೆ: ಬಿ.ಟಿ. ಷಡಕಪ್ಪ (5) ಶಂಭುಲಿಂಗಪ್ಪ ಬಿನ್. ಲೇ ಸಿದ್ದಪ್ಪ (6) ಶ್ರೀಮತಿ ಕರಿಬಸಮ್ಮ ಕೋಂ, ಶಂಭುಲಿಂಗಪ್ಪ, (7) ಶ್ರೀಮತಿ ಗೌರಮ್ಮ ತಂದೆ: ಶಂಭುಲಿಂಗಪ್ಪ, (8) ಶ್ರೀ ರುದ್ರೇಶ್ ಬಿನ್, ಶಂಭುಲಿಂಗಪ್ಪ, (9) ಶ್ರೀ ಸಿದ್ದೇಶ್ ಬಿನ್, ಶಂಭುಲಿಂಗಪ್ಪ, (10) ಶ್ರೀ ಬಿ.ಟಿ. ರೇವಣಸಿದ್ದಪ್ಪ ಬಿನ್, ಲೇ।। ಸಿದ್ದಪ್ಪ, (11) ಶ್ರೀಮತಿ ಸುನಿತಾ ಕೋಂ. ಬಿ.ಟಿ. ರೇವಣಸಿದ್ದಪ್ಪ (12) ಶ್ರೀ ಮಹೇಂದ್ರ ಬಿನ್, ಬಿ.ಟಿ. ರೇವಣಸಿದ್ದಪ್ಪ, (13) ಶ್ರೀ ಟಿ.ತಿಪ್ಪೇಸ್ವಾಮಿ ಬಿನ್, ಲೇ।। ಬಸಪ್ಪ, (14) ಶ್ರೀಮತಿ ಗಿರಿಜಾ ಕೋಂ, ಬಿ. ತಿಪ್ಪೇಸ್ವಾಮಿ (15) ಟಿ. ಶ್ರೀನಿವಾಸ ಬಿನ್, ಬಿ. ತಿಪ್ಪೇಸ್ವಾಮಿ, (16) ಶ್ರೀಮತಿ ನಂದಿನಿ ತಂದೆ: ತಿಪ್ಪೇಸ್ವಾಮಿ, ಕ್ರ.ಸಂ. 01 ರಿಂದ 16 ರ ವರೆಗಿನವರ ವಾಸ: ಬಸಾಪುರ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು & ಜಿಲ್ಲೆ ಹಾಗೂ (17) ಶ್ರೀ ಎ.ಆರ್. ವಿಜಯಕುಮಾರ್ ಬಿನ್ ಎ.ಆರ್. ಬಸಪ್ಪ, (18) ಶ್ರೀಮತಿ ಮಮತಾ ಕೋಂ, ಕೋಂ. ಎ.ಆರ್. ವಿಜಯಕುಮಾರ್, ಕ್ರಸಂ.17 ಮತ್ತು 18ರವರ ವಾಸ: ಆನೆಕೊಂಡ ಗ್ರಾಮ, ಕಸಬಾ ಹೋಬಳಿ, ದಾವಣಗೆರೆ ತಾಲ್ಲೂಕು & ಜಿಲ್ಲೆ. ಈ ಮೇಲ್ಕಂಡ ಕ್ರ.ಸಂ. 1 ರಿಂದ 18 ರ ವರೆಗಿನವರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ತೋರಿಸಿರುವ ಪರಿಶಿಷ್ಟ ಜಮೀನುಗಳನ್ನು ನನ್ನ ಕಕ್ಷಿದಾರರಿಗೆ ಈ ಹಿಂದೆ ಮಾರಾಟ ಮಾಡಲು ಇಚ್ಛಿಸಿ ಅಂದಿನ ಮಾರ್ಕೆಟ್ ಬೆಲೆಯನ್ನು ನಿಗದಿಪಡಿಸಿ, ನನ್ನ ಕಕ್ಷಿದಾರರಿಂದ ಮುಂಗಡವಾಗಿ ಹಣವನ್ನು ಪಡೆದು, ಸದರಿ ಷೆಡ್ಯೂಲ್ ಸೊತ್ತುಗಳ ಕ್ರಯದ ಕರಾರು ಪತ್ರವನ್ನು ಸಹ ಸಾಕ್ಷಿದಾರರ ಸಮಕ್ಷಮದಲ್ಲಿ ಬರೆದುಕೊಟ್ಟಿರುವುದು ಸರಿಯಷ್ಟೆ, ಕಾಲಕ್ರಮೇಣ ಈ ಮೇಲ್ಕಂಡ ಕ್ರ.ಸಂ. 1 ರಿಂದ 18 ರವರೆಗಿನ ವ್ಯಕ್ತಿಗಳು ಒಂದಿಲ್ಲೊಂದು ಕಾರಣವನ್ನು ಹೇಳುತ್ತಾ, ಈ ಕೆಳಕಂಡ ಪರಿಶಿಷ್ಟದಲ್ಲಿ ವಿವರಿಸಿರುವ ಸೊತ್ತುಗಳನ್ನು ನೋಂದಾಯಿಸಿಕೊಡದೇ ಕಾಲಹರಣ ಮಾಡುತ್ತಾ ಬಂದಿದ್ದು, ಈಗ ತಮ್ಮ ಹೆಸರಿಗಿರುವ ಪರಿಶಿಷ್ಟ ಸೊತ್ತುಗಳನ್ನು ಬೇರೊಬ್ಬರ ಹೆಸರಿಗೆ ಮಾರಾಟ/ಪರಭಾರೆ/ಅಡಮಾನ ಇತ್ಯಾದಿ ದಾಖಲೆಗಳನ್ನು ಮಾಡಿಕೊಡುವ ಹುನ್ನಾರದಲ್ಲಿರುತ್ತಾರೆ ಎಂಬ ವರ್ತಮಾನವು ನನ್ನ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ. ಆದುದರಿಂದ ನನ್ನ ಕಕ್ಷಿದಾರರು/ವಾದಿಗಳಾದ ಎನ್.ಆರ್. ಲಕ್ಷ್ಮೀಕಾಂತ್ ಮತ್ತು ಜಿ.ಪಿ.ಎ. ಹೋಲ್ಡರ್ ಲಿಂಗರಾಜ್ ನಾಯ್ಕ ಇವರುಗಳು ದಾವಣಗೆರೆ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ Specific Performance of Contract **ಅಡಿಯಲ್ಲಿ ಕ್ರಮವಾಗಿ ಅಸಲು ದಾವೆ ಸಂಖ್ಯೆ: 123/2024, ಅಸಲು ದಾವೆ ಸಂಖ್ಯೆ: 125/2024, ಅಸಲು ದಾವೆ ಸಂಖ್ಯೆ 126/2024, ಅಸಲು ದಾವೆ ಸಂಖ್ಯೆ 127/2024, ಅಸಲು ದಾವೆ ಸಂಖ್ಯೆ 128/2024 ರಂತೆ ದಾವೆಯನ್ನು ಹೂಡಿದ್ದು, ಸದರಿ ದಾವೆಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಮಧ್ಯಂತರ ಅರ್ಜಿಯ ಪ್ರಾರ್ಥನೆಯ ಅನ್ವಯ ಸದರಿ ಆಸ್ತಿಯನ್ನು ಪ್ರತಿವಾದಿಗಳಾಗಲೀ ಹಾಗೂ ಪ್ರತಿವಾದಿಗಳ ಪರ ಯಾವುದೇ ಅಟಾರ್ನಿ ಹೋಲ್ಡರ್ಸ್, ಏಜೆಂಟ್ಸ್, ಸ್ನೇಹಿತರು ಮತ್ತು ಯಾವುದೇ ವ್ಯಕ್ತಿಗಳು ಬೇರೆ ಯಾರಿಗೂ ಯಾವುದೇ ರೀತಿಯಿಂದಲೂ ಮಾರಾಟ, ಅಡಮಾನ, ದಾನ, ಪಾಲು ವಿಭಾಗ ಇನ್ನಿತರೆ ಯಾವುದೇ ರೀತಿಯಲ್ಲೂ ದಾಖಲಾತಿಗಳನ್ನು ನೋಂದಾವಣಿ ಮಾಡಿಕೊಳ್ಳಬಾರದು ಎಂದು ಮಧ್ಯಕಾಲಿನ ಅರ್ಜಿಯ ಪ್ರಾರ್ಥನೆಯಂತೆ** Not to Alienate **ಆದೇಶವನ್ನು ಕ್ರಮವಾಗಿ ಮಧ್ಯಂತರ ಅರ್ಜಿ ಸಂಖ್ಯೆ: 1/2024 ರಡಿಯಲ್ಲಿ ಘನ ನ್ಯಾಯಾಲಯದಿಂದ ದಿನಾಂಕ: 27-04-2024 ರಂದು ಪಡೆದುಕೊಂಡಿದ್ದು ಇರುತ್ತದೆ.**

ಆದುದರಿಂದ ಸಾರ್ವಜನಿಕರಲ್ಲಿ ಈ ಸಾರ್ವಜನಿಕ ಪತ್ರಿಕಾ ಪ್ರಕಟಣೆ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ಕ್ರ.ಸಂ. 1 ರಿಂದ 18 ರ ವರೆಗಿನ ವ್ಯಕ್ತಿಗಳೊಂದಿಗೆ ಈ ಕೆಳಕಂಡ ಪರಿಶಿಷ್ಟದಲ್ಲಿ ವಿವರಿಸಿರುವ ಸೊತ್ತುಗಳ ವಿಷಯದಲ್ಲಿ. ಯಾರೊಬ್ಬರೂ ಕೂಡಾ ಸದರಿ ಜಮೀನುಗಳಿಗೆ/ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾರಾಟ, ಪರಭಾರೆ, ಕ್ರಯ ಪ್ರಕ್ರಿಯೆಯಲ್ಲಿ ಭಾಗವಹಿಸಬಾರದೆಂದು ಈ ಪತ್ರಿಕಾ ಪ್ರಕಟಣೆ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಹಾಗೇನಾದರೂ ಸದರಿ ಪರಿಶಿಷ್ಟದಲ್ಲಿ ವಿವರಿಸಿರುವ ಆಸ್ತಿಗಳನ್ನು ಕ್ರಯ ಮತ್ತು ಇತರೆ ಯಾವುದೇ ರೂಪದಲ್ಲಿ ಪಡೆದುಕೊಂಡಲ್ಲಿ ಅದಕ್ಕೆ ಆಗುವ ಕಾನೂನು ಬದ್ಧ ಲುಕ್ಸಾನುಗಳಗೆ ತಾವೇ ನೇರ ಜವಾಬ್ದಾರರಾಗಿರುತ್ತೀರಿ. ಒಂದು ವೇಳೆ ಈ ಸಾರ್ವಜನಿಕ ಪ್ರಕಟಣೆಯನ್ನು ಉಲ್ಲಂಘಿಸಿ ತಾವೇನಾದರೂ ಪರಿಶಿಷ್ಟದಲ್ಲಿ ವಿವರಿಸಿರುವ ಸೊತ್ತುಗಳ ವಿಷಯದಲ್ಲಿ ಮಾರಾಟ, ಪರಭಾರೆ, ಅಡಮಾನ ಮತ್ತು ಇತ್ಯಾದಿ ಪ್ರಕ್ರಿಯೆಯಿಂದ ನನ್ನ ಕಕ್ಷಿದಾರರಿಗೆ/ವಾದಿಯರಿಗೆ ಯಾವುದೇ ರೀತಿಯಿಂದಲೂ ಬಾಧಕವಾಗುವುದಿಲ್ಲ ಎಂದು ಈ ಸಾರ್ವಜನಿಕ ಪ್ರಕಟಣೆ ಮೂಲಕ ತಿಳಿಯಪಡಿಸಲಾಗಿದೆ. ಸಿವಿಲ್ ವ್ಯಾಜ್ಯಕ್ಕೆ ಒಳಪಡುವ ಷೆಡ್ಯೂಲ್ ಸೊತ್ತಿನ ಆಸ್ತಿಯ ವಿವರಗಳು. ಈ ಕೆಳಕಂಡಂತಿವೆ.

### : ಪರಿಶಿಷ್ಟ ಷೆಡ್ಯೂಲ್ ಸೊತ್ತುಗಳು :

1) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರಿ.ಸರ್ವೆ ನಂ.93/5ಎ ರ ವಿಸ್ತೀರ್ಣ: ಎಕರೆ-ಇಲ್ಲಾ, ಗುಂಟೆ-30 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಚನ್ನಬಸಮ್ಮನವರ ಜಮೀನು, ಪಶ್ಚಿಮಕ್ಕೆ : ಸಿದ್ದಪ್ಪನವರ ಜಮೀನು, ಉತ್ತರಕ್ಕೆ : ಗಂಗಾಧರಪ್ಪನವರ ಜಮೀನು, ದಕ್ಷಿಣಕ್ಕೆ : ನಾಗಪ್ಪನವರ ಜಮೀನು. 2) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರಿ.ಸರ್ವೆ ನಂ.93/5ಪಿ1 ರ ವಿಸ್ತೀರ್ಣ: ಎಕರೆ-ಇಲ್ಲಾ, ಗುಂಟೆ-08 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ರಾಜಶೇಖರಪ್ಪನವರ ಜಮೀನು, ಪಶ್ಚಿಮಕ್ಕೆ : ಷಡಕಪ್ಪ ಹಾಗೂ ಅವರ ಅಣ್ಣ-ತಮ್ಮಂದಿರ ಜಮೀನು, ಉತ್ತರಕ್ಕೆ : ಶಂಭುಲಿಂಗಪ್ಪನವರ ಜಮೀನು, ದಕ್ಷಿಣಕ್ಕೆ : ರಾಜಶೇಖರಪ್ಪನವರ ಜಮೀನು.

3) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರಿ.ಸರ್ವೆ ನಂ.89 ರ ವಿಸ್ತೀರ್ಣ: ಎಕರೆ-02, ಗುಂಟೆ-35 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ರೇವಕ್ಕ ಬಸಪ್ಪನವರ ಜಮೀನು, ಪಶ್ಚಿಮಕ್ಕೆ : ಸಿದ್ದಪ್ಪ ಮತ್ತು ರೇವಕ್ಕ ಬಸಪ್ಪನವರ ಜಮೀನು, ಉತ್ತರಕ್ಕೆ : ಚಾನಲ್ ರಸ್ತೆ, ದಕ್ಷಿಣಕ್ಕೆ : ನಾಗಪ್ಪನಿಗೆ ಸೇರಿದ ರಿ.ಸ.ನಂ.93/5ಪಿ ರ ಜಮೀನು.

4) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರೀ.ಸರ್ವೆ ನಂ.90 ರ ವಿಸ್ತೀರ್ಣ: ಎಕರೆ-02, ಗುಂಟೆ-34 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಶಂಭುಲಿಂಗಪ್ಪನವರ ಜಮೀನು, ಪಶ್ಚಿಮಕ್ಕೆ : ಚನ್ನಬಸಪ್ಪನವರ ಜಮೀನು, ಉತ್ತರಕ್ಕೆ : ರೇವಕ್ಕ ಬಸಪ್ಪನವರ ಜಮೀನು, ದಕ್ಷಿಣಕ್ಕೆ : ಚನ್ನಬಸಮ್ಮನವರ ಜಮೀನು.

5) ದಾವಣಗೆರೆ ಅಲ್ಲಿ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರಿ.ಸರ್ವೆ ನಂ.91 ರ ವಿಸ್ತೀರ್ಣ: ಎಕರೆ-01, ಗುಂಟೆ 14 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಹಯಾ ಸಾಹೇಬ್ ಜಮೀನು, ಪಶ್ಚಿಮಕ್ಕೆ : ಹಳ್ಳ, ಉತ್ತರಕ್ಕೆ : ತವಡೂರು ಸಿದ್ದಪ್ಪನವರ ಜಮೀನು, ದಕ್ಷಿಣಕ್ಕೆ : ಯಲಿಗಾರ ಸಿದ್ದಪ್ಪನವರ ಜಮೀನು.

6) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರೀ.ಸರ್ವೆ ನಂ.93/4ಪಿ3 ರ ವಿಸ್ತೀರ್ಣ: ಎಕರೆ-02, ಗುಂಟೆ-18 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಕೊರಚರು ಜಮೀನು, ಪಶ್ಚಿಮಕ್ಕೆ : ಶಂಭಣ್ಣನವರ ಜಮೀನು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಮಂಜಪ್ಪನವರ ಜಮೀನು,

7) ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ ಬಸಾಪುರ ಗ್ರಾಮಕ್ಕೆ ಸೇರಿದ ರೀ.ಸರ್ವೆ ನಂ.88/1 ರ ವಿಸ್ತೀರ್ಣ: ಎಕರೆ-ಇಲ್ಲಾ, ಗುಂಟೆ-34 ವುಳ್ಳ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಶಂಭಣ್ಣನವರ ಜಮೀನು, ಪಶ್ಚಿಮಕ್ಕೆ): ಚನ್ನಬಸಪ್ಪನವರ ಜಮೀನು, ಉತ್ತರಕ್ಕೆ : ಗೌರಮ್ಮನವರ ಜಮೀನು, ದಕ್ಷಿಣಕ್ಕೆ : ಪಡಕಪ್ಪ ಮತ್ತು ಇತರೆಯವರ ಜಮೀನು,

**ಸ್ಥಳ : ದಾವಣಗೆರೆ**
**ದಿನಾಂಕ : 09.05.2024**


**ಕಕ್ಷಿದಾರರ ಪರ ವಕೀಲರು**
**ಸಹಿ/- ಶ್ರೀಯುತ ಕೆ.ಜಿ.ಕೆ. ಸ್ವಾಮಿ ಮತ್ತು ಶ್ರೀ ಎಂ. ಕುಮಾರ ನಾಯ್ಕ**
**ನ್ಯಾಯವಾದಿಗಳು, 'ಲಾ ಸಲ್ಯೂಷನ್ಸ್, ನಂ.417, 1ನೇ ಮಹಡಿ, 'ಬೆನಕೇಶ್ ಪ್ಲಾಜಾ'**
**ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ : 9844413266, 9880847776**



ಮಹಿಳಾ ಸೇವಾ ಸಮಾಜ (ರಿ.)

# ಶ್ರೀಮತಿ ಟಿ.ಎಂ. ಚಿನ್ನಮ್ಮ ಮಹೇಶ್ವರಯ್ಯ ಮೆಮೋರಿಯಲ್ ಪ.ಪೂ.ಕಾಲೇಜ್

(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ) ಅಶೋಕ ರಸ್ತೆ, ದಾವಣಗೆರೆ – 2. ಫೋನ್ : 08192 – 233010


**ವಾಣಿಜ್ಯ ವಿಭಾಗ 99%**

**2023–24ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ 99% ಫಲಿತಾಂಶ ಸಾಧಿಸಿರುವುದು ಹೆಮ್ಮೆಯ ವಿಷಯ**

**ಕಲಾ ವಿಭಾಗ 99%**

| ಡಿಸ್ಟಿಂಕ್ಷನ್ – 04 | ಪ್ರಥಮದರ್ಜೆ – 11 | ದ್ವಿತೀಯ ದರ್ಜೆ – 10 |
|---|---|---|

**ವಾಣಿಜ್ಯ ವಿಭಾಗ**



ಗಗನ ಎಂ **89.83%**



ಮಾನ್ಯ ಎಸ್.ಜೆ **87.16%**

**ಕಲಾ ವಿಭಾಗ**



ದೀಕ್ಷಿತಾ **91.60%**



ರೇಖಾ ಹೆಚ್. **87.16%**

ವಿಶೇಷ ದರ್ಜೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿನಿಯರಿಗೆ ಆಡಳಿತ ಮಂಡಳಿ, ಪ್ರಾಚಾರ್ಯರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ




**2024–25ನೇ ವರ್ಷದ ಪ್ರಥಮ ಪಿ.ಯು.ಸಿ. ಕಲಾ ಮತ್ತು ವಾಣಿಜ್ಯ ತರಗತಿಗಳಿಗೆ ಪ್ರವೇಶ ಪ್ರಕಟಣೆ**

| ಸಂಯೋಜನೆಗಳು | | ವಿಷಯ ಸಂಯೋಜನೆಗಳು |
|---|---|---|
| ಕಲಾ ವಿಭಾಗ : | ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಶಿಕ್ಷಣಶಾಸ್ತ್ರ (HEPEd.) | ಭಾಗ –1 – ಕನ್ನಡ, ಇಂಗ್ಲೀಷ್ |
| ವಾಣಿಜ್ಯ ವಿಭಾಗ : | ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ, ಲೆಕ್ಕಶಾಸ್ತ್ರ, ಕಂಪ್ಯೂಟರ್ (EBACS) | ಭಾಗ –2 – ಐಚ್ಛಿಕ ವಿಷಯಗಳು |

**ಕಾಲೇಜಿನ ವೈಶಿಷ್ಟತೆಗಳು**

* ಕಾಲೇಜ್ ನಗರದ ಮಧ್ಯಭಾಗದಲ್ಲಿದ್ದು, ಸುತ್ತಮುತ್ತ ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಿಗೆ ಹತ್ತಿರದಲ್ಲಿರುತ್ತದೆ. * ಸಾಂಸ್ಕೃತಿಕ ಬೆಳವಣಿಗೆ, ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಪ್ರೋತ್ಸಾಹ * ಅನುಭವಿ ಉಪನ್ಯಾಸಕರಿಂದ ನಿಸ್ವಾರ್ಥ ಸೇವೆ ಹಾಗೂ ಆಡಳಿತ ಮಂಡಳಿಯವರಿಂದ ಪ್ರೋತ್ಸಾಹ * ಸುಸಜ್ಜಿತ ವಾಚನಾಲಯ, ಗಣಕಯಂತ್ರ ಪ್ರಯೋಗಾಲಯ ಹಾಗೂ ಸುರಕ್ಷಿತ ಕ್ಯಾಂಪಸ್ * ಪ್ರತಿ ವಿದ್ಯಾರ್ಥಿನಿಯರಿಗೂ ವೈಯಕ್ತಿಕ ಗಮನ ಹಾಗೂ ಕಲಿಕೆಗೆ ಪ್ರೋತ್ಸಾಹ * ಪರಿಹಾರ ಬೋಧನಾ ತರಗತಿಗಳು * ಪ್ರತಿ ತಿಂಗಳು ಕಿರು ಪರೀಕ್ಷೆಗಳು * ವಿಶಾಲವಾದ ಕಟ್ಟಡ * ಮೌಲ್ಯಯುತ ಶಿಕ್ಷಣ

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ **ಫೋ. 08192-233010 ಮೊ. : 9980432468, 8792181964**
Email ID : chinnammacollege@gmail.com

**ಶ್ರೀಮತಿ ಕೆ.ಕೆ.ಸುಶೀಲಮ್ಮ** ಅಧ್ಯಕ್ಷರು | **ಶ್ರೀಮತಿ ಜಯ್ಯಮ್ಮ ನೀಲಗುಂದ** ಕಾರ್ಯದರ್ಶಿ | **ಶ್ರೀ ರವಿಕುಮಾರ್ ಹೆಚ್. ಎಸ್.** ಪ್ರಾಚಾರ್ಯರು




ಮಣಿಪಾಲ್ ಎಜುಕೇಷನ್ ಟ್ರಸ್ಟ್ (ರಿ)

# ಶ್ರೀ ಸೋಮೇಶ್ವರ ವಿದ್ಯಾಲಯ

## ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯ

ಗೋಣಿವಾಡ, ಚನ್ನಗಿರಿ ರಸ್ತೆ

DISTRICT 2ND TOPPER

ಗ್ರಾಮೀಣ ಭಾಗದಲ್ಲೊಂದು ಶೈಕ್ಷಣಿಕ ಕ್ರಾಂತಿ

**100% RESULT**

ಗ್ರಾಮೀಣ ಭಾಗದಲ್ಲಿ ಸತತ 11ನೇ ವರ್ಷ ಶೇ 100 ಫಲಿತಾಂಶ ಪಡೆದ ಏಕೈಕ ಶಾಲೆ



ಲಿಖಿತ ಕೆ. ಆರ್. 614/625 98.24%

ಪರೀಕ್ಷೆಗೆ ಹಾಜರಾದವರು: 45

ಡಿಸ್ಟಿಂಕ್ಷನ್ : 28 | ಪ್ರಥಮ : 17

| | | | |
|---|---|---|---|
| ವೆಂಕಟೇಶ್ ಕೆ ಎಸ್ 96.00% | ಪೂರ್ಣಶ್ರೀ ಎಂ 95.20% | ಜೀವಿತಾ ಹೆಚ್ ಪಿ 94.88% | ಸ್ನೇಹಾ ಎಸ್ ಕೆ 94.56% |
| ಹೇಮಾ ಹೆಚ್ ಎಸ್ 93.76% | ವರ್ಷಿಣಿ ಎಸ್ 93.12% | ಗೌರಿ ಕೆ ಎಂ 92.80% | ಪೂರ್ವಿಕಾ ಎಂ 93.16% |
| ಮನು ಎಂ ಕಾಕನೂರು 91.20% | ವಿಜಯ ಶೇಷಾಶ್ರೀ ಜಿ 91.20% | ಸಿಂಚನಾ ಕೆ ಬಿ 91.04% | ಚೈತ್ರ ಕೆ ಆರ್ 90.88% |
| ದೀಕ್ಷಾ ಆರ್ ಬಿ 90.88% | ಕಿಶೋರ್ ಕೆ ಆರ್ 90.24% | ವಿಜಯಲಕ್ಷ್ಮೀ ಕೆ ಎನ್ 90.08% | ಶರತ್ ಪಾಟೀಲ್ ಎಂ ಹೆಚ್ 89.12% |
| ಯೋಜನ್ ಕುಮಾರ್ ಪಿ 88.96% | ಸೌಜನ್ಯ ವಿ 88.80% | ಅಮೃತ ಎಂ ಬಿ 88.16% | ವೆಂಕಟಲಕ್ಷ್ಮೀ ಶಿರಿಷ ಕೆ 88.16% |
| ಸೌಮ್ಯ ಶ್ರೀ ವಿ 88.00% | ತೇಜಸ್ವಿನಿ ಬಿ ಎಂ 87.84% | ಕಾರ್ತಿಕ್ ಡಿ ಜಿ 87.68% | ಚಿನ್ಮಯೀ ಕೆ ಪಿ 87.52% |
| ಸುಪಿಯಾ ಡಿ 87.52% | ಸಿಂಚನ ಎಂ 87.04% | ಸಿಂಚನ ಹೆಚ್ ಆರ್ 85.60% | |

## ಶ್ರೀ ಸೋಮೇಶ್ವರ ವಿದ್ಯಾಲಯ (ಆಂಗ್ಲ ಮಾಧ್ಯಮ)

ನಿಟ್ಟುವಳ್ಳಿ ಮುಖ್ಯರಸ್ತೆ, ರೂರಲ್ ಪೊಲೀಸ್ ಸ್ಟೇಷನ್ ಹತ್ತಿರ, ದಾವಣಗೆರೆ

SUCCESSFUL JOURNEY FROM 16 YEARS CONTINUOUSLY

DISTRICT 5TH TOPPER



612/625 98.00% ಸೃಜನ ವೈ .ಎಂ.

ಪರೀಕ್ಷೆಗೆ ಹಾಜರಾದವರು: 74

ಡಿಸ್ಟಿಂಕ್ಷನ್ : 30 | ಪ್ರಥಮ : 43 | ದ್ವಿತೀಯ : 1

| | | | |
|---|---|---|---|
| ರಮ್ಯಶ್ರೀ ಎಸ್ ಎಸ್ 95.84% | ಸಹನ ಕೆ ಎಂ 95.68% | ಸಿಂಚನ ಆರ್ 94.40% | ಯುವಶ್ರೀ ಸಿ ಎಸ್ 94.40% |
| ಅಪೂರ್ವ ಡಿ ಆರ್ 94.08% | ಅಭಿಜ್ಞಾ ಎಸ್ 93.92% | ಪ್ರೀತಮ್ ಎಸ್ ಪಿ 92.48% | ಸಿರಿ ಬಿ ಕೆ 92.00% |
| ಸಾಯಿ ತೇಜಸ್ ಹೆಚ್ 91.84% | ಚೇತನ್ ಜಿ ಚಕ್ರಸಾಲಿ 91.52% | ಜ್ಞಾನೇಶ್ ಬಿ 91.36% | ವಿಕಾಸ್ ಯು 91.36% |
| ಶ್ರೇಯಸ್ ಗುಪ್ತಾ 91.20% | ಅರ್ಜುನ್ ರಾವ್ ಪಿ 91.04% | ಸಂಪ್ರೀತ್ ಎಸ್ 90.72% | ಮೇಘನಾ ಎಂ ಓ 90.24% |
| ಸಿದ್ದಾರೂಢ ಬಿ 89.92% | ತೇಜಸ್ವಿನಿ ಎಸ್ ಎ 89.76% | ರಮ್ಯ ಡಿ 89.12% | ಸ್ಪಂದನಾ ಆರ್ 89.12% |
| ಯಶಸ್ ಡಿ ಜಿ 88.00% | ಸಮರ್ಥ ಶರ್ಮ 87.84% | ಪುನೀತ್ ಆರ್ 87.68% | ಸಚಿನ್ ಕೆ ಎಂ 87.04% |
| ಅಭಿಷೇಕ್ ಎ ಎನ್ 86.88% | ಶ್ರೀಲಕ್ಷ್ಮೀ ಕೆ ಎಂ 86.72% | ಯಶಸ್ವಿನಿ ಹೆಚ್ 86.08% | ಜಾನ್ವಿ ಲಕ್ಷ್ಮೀ ಕೆ ಎನ್ 85.12% |
| | | | ಗುರುಕಿರಣ್ ಎಂ 84.64% |

**ಭಾರತೀಯ ಸಂಸ್ಕೃತಿಯೊಂದಿಗೆ ಆಧುನಿಕ ಶಿಕ್ಷಣ**




**2023-24ರ ಶೈಕ್ಷಣಿಕ ವರ್ಷದಿಂದ ಶ್ರೀ ಸೋಮೇಶ್ವರ ವಿದ್ಯಾಲಯ ಮತ್ತು ಸರ್ ಎಂ. ವಿ. ಸಂಸ್ಥೆಗಳು ಜಂಟಿಯಾಗಿ JEE, IIT, NEET ವಿಶೇಷ ತರಬೇತಿ ನೀಡಲು 6ನೇ ತರಗತಿಯಿಂದ ಒಲಂಪಿಯಾಡ್ ಸ್ಕೂಲ್‌ನ್ನು ಪ್ರಾರಂಭಿಸಲಾಗಿದೆ.**

- 30 ಮಕ್ಕಳಿಗೆ ಒಂದು ತರಗತಿ
- ನುರಿತ, ಯುವ ಉತ್ಸಾಹಿ ಶಿಕ್ಷಕರಿಂದ ತರಬೇತಿ
- ಪೌಷ್ಟಿಕಾಂಶವುಳ್ಳ ಆಹಾರ ಮತ್ತು ವಸತಿ ಸೌಲಭ್ಯ
- ಪಠ್ಯೇತರ ಚಟುವಟಿಕೆಗಳಿಗೆ ಪ್ರೋತ್ಸಾಹ
- ಅತ್ಯುತ್ತಮ ವಿಜ್ಞಾನದ ಲ್ಯಾಬ್‌ಗಳು

**2024 25ನೇ ಶೈಕ್ಷಣಿಕ ವರ್ಷಕ್ಕೆ ಪ್ಲೇ-ಗ್ರೂಪ್‌ನಿಂದ 10ನೇ ತರಗತಿವರೆಗೆ**

## ದಾಖಲಾತಿ ಪ್ರಾರಂಭವಾಗಿದೆ

ಹೆಚ್.ಆರ್. ಅಶೋಕರೆಡ್ಡಿ
ಅಧ್ಯಕ್ಷರು

2023-24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯ ಸಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಶಿಕ್ಷಕ ಸಮುದಾಯದವರಿಗೂ ಹಾಗೂ ಸಹಕರಿಸಿದ ಪೋಷಕರಿಗೂ ಹಾರ್ದಿಕ ಅಭಿನಂದನೆಗಳು

ಕೆ.ಎಂ. ಸುರೇಶ್
ಗೌರವ ಕಾರ್ಯದರ್ಶಿಗಳು

ಸಂಪರ್ಕಿಸಿ: 7019982516 • 9844088896 • 8827460196 • 9844422633 • 9844161565 • 08192 262482



# 2024 ಗುರು ಗ್ರಹವು 12 ವರ್ಷಗಳ ಬಳಿಕ ವೃಷಭ ರಾಶಿ ಪ್ರವೇಶ



## ಯಾವ ರಾಶಿಗಳ ಮೇಲೆ ಗುರುವಿನ ಕೃಪಾಕಟಾಕ್ಷ...

**ಶ್ರೀ ವಿಜಯಾಭ್ಯುದಯ ಶ್ರೀಮನ್ನೃಪ ಶಾಲಿವಾಹನ ಶಕೆ 1946 ನೇ ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರಮಾಸ ಕೃಷ್ಣಪಕ್ಷ ಅಷ್ಟಮೀ ದಿನಾಂಕ: 1.5.2024 ನೇ ಬುಧವಾರ ಮಧ್ಯಾಹ್ನ 2 ಗಂಟೆ 3 ನಿಮಿಷಕ್ಕೆ ಸಂದು, ಶುಭ ಸಿಂಹ ಲಗ್ನ ಶ್ರವಣಾ ನಕ್ಷತ್ರ, ಶುಭಯೋಗ, ಬಾಲಕರಣ ಈ ಶುಭ ಮುಹೂರ್ತದಲ್ಲಿ ಗುರುಗ್ರಹವು ಕೃತ್ತಿಕಾ ನಕ್ಷತ್ರ ಮೊದಲನೇ ಚರಣ ಮೇಷ ರಾಶಿಯಿಂದ, ಕೃತ್ತಿಕಾ ನಕ್ಷತ್ರ ಎರಡನೇ ಚರಣದಲ್ಲಿ ಅಂದರೆ ವೃಷಭ ರಾಶಿಗೆ ಪ್ರವೇಶವಾಗಿದ್ದು, ಈ ಸಂದರ್ಭದಲ್ಲಿ ದ್ವಾದಶ ರಾಶಿಗಳ ಫಲಾಫಲವನ್ನು ಈ ಕೆಳಕಂಡಂತೆ ವಿಮರ್ಶಿಸಲಾಗಿದೆ.**

| | | | |
|---|---|---|---|
| ಬುಧ ಕುಜ ರಾಹು | ರವಿ ಶುಕ್ರ | ಗುರು | |
| ಶನಿ | ಗುರು ವೃಷಭ ರಾಶಿ ಪ್ರವೇಶ ಕಾಲದಲ್ಲಿ ಕುಂಡಲಿ | | ಲಗ್ನ |
| ಚಂದ್ರ | | | ಕೇತು |

**ಮೇಷ ರಾಶಿ :**
ಈ ರಾಶಿಯವರಿಗೆ ಗುರುವು ತನು ಸ್ಥಾನದಿಂದ ಧನಸ್ಥಾನಕ್ಕೆ ಪ್ರವೇಶಿಸಲಿದ್ದು, ಶತ್ರುಗಳನ್ನೂ ಕೂಡ ಮಿತ್ರರಂತೆ ಕಾಣುವರು, ಲೇಖನಗಳಲ್ಲಿ ಆಸಕ್ತರಾಗಿ ಸಾಹಿತ್ಯ ಪ್ರಿಯರಾಗುವರು, ಆದಾಯದ ಮೂಲವನ್ನು ಹತ್ತು ಹಲವು ಮಾರ್ಗಗಳಿಂದ ಹೆಚ್ಚಿಸಿಕೊಳ್ಳುವರು, ಸನ್ಮಾರ್ಗದಲ್ಲಿ ನಡೆದು, ಗುರು-ಹಿರಿಯರ ಪ್ರೀತಿಗೆ ಪಾತ್ರರಾಗುವರು, ಮತ್ತೊಬ್ಬರ ಕಷ್ಟಗಳಿಗೆ ಮರುಗುವರು, ವಿದ್ಯಾರ್ಥಿಗಳು ಯಶಸ್ಸಿನ ಹಾದಿಯಲ್ಲಿ ನಡೆಯುವರು, ಉತ್ತಮ ಕೀರ್ತಿವಂತರಾಗಿ ಮಾನ-ಸನ್ಮಾನಗಳಿಗೆ ಅರ್ಹ ರಾಗುವರು, ಆದರೆ ಹಲ್ಲು ನೋವು, ಮುಖ ರೋಗಗಳು ಬಾಧಿಸಲಿವೆ. ಹೇರಳ ಧನ ಸಂಗ್ರಹ ಮಾಡುವರು.

**ವೃಷಭ ರಾಶಿ :**
ಈ ರಾಶಿಯವರಿಗೆ ಗುರುವು ವ್ಯಯ ಸ್ಥಾನದಿಂದ ತನು ಸ್ಥಾನಕ್ಕೆ ಪ್ರವೇಶಿಸಲಿದ್ದು, ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚಿನ ಯಶಸ್ಸು ಗಳಿಸುವರು. ಅತ್ಯಂತ ಸುಖೀ ಜೀವನ ನಡೆಸುವರು. ಪಂಡಿತರಿಗೆ ರಾಜ ಸನ್ಮಾನವಾಗಲಿದೆ. ಕಷ್ಟದಲ್ಲಿರುವವರಿಗೆ ಸಹಾಯ ಮಾಡುತ್ತಾ, ತಮ್ಮ ವರ್ಚಸನ್ನು ಹೆಚ್ಚಿಸಿಕೊಳ್ಳುವರು. ಸಂಪಾದಿತ ಧನವು ಬಂದ ರೀತಿಯಲ್ಲೇ ಖರ್ಚಾಗುವುದು, ಎಲ್ಲರ ಮೇಲೆ ಅಧಿಕಾರ ಚಲಾಯಿಸುತ್ತಾ, ತಮ್ಮ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುವರು. ಹೆಚ್ಚು-ಹೆಚ್ಚು ಧಾರ್ಮಿಕ ವಿಧಿ-ವಿಧಾನಗಳಲ್ಲಿ ಆಸಕ್ತಿ ಮೂಡಲಿದೆ, ಆದರೆ ಇವರು ವೈಯಕ್ತಿಕ ಆರೋಗ್ಯದ ಕಡೆ ಗಮನ ಹರಿಸುವುದು ಮುಖ್ಯವಾಗಬೇಕು. ಸಂಪಾದನೆ ಸನ್ಮಾರ್ಗದಲ್ಲಿದ್ದರೆ ಉತ್ತಮ, ಗುರು-ಹಿರಿಯರಲ್ಲಿ ಗೌರವವಿರಲಿ.

**ಮಿಥುನ ರಾಶಿ :**
ಗುರುವು ಈ ರಾಶಿಯವರಿಗೆ ವ್ಯಯ ಸ್ಥಾನದಲ್ಲಿರುವುದರಿಂದ ಕಪಟ ಮಾರ್ಗದಲ್ಲಿ ಹಣ ಗಳಿಸುವ ಇವರು ಅದನ್ನು ದುರ್ವ್ಯಸನಗಳಿಗೆ ವಿನಿಯೋಗಿಸುವರು. ಕೈಗೊಂಡ ಕೆಲಸ ಕಾರ್ಯಗಳು ನಷ್ಟವನ್ನನುಂಟು ಮಾಡಬಹುದು ಅಥವಾ ಯೋಜನೆಗಳು ವ್ಯರ್ಥವಾಗುವವು. ಬಂಧುಗಳೊಂದಿಗೆ ವಿನಾಕಾರಣ ದ್ವೇಷ, ಅಪಕೀರ್ತಿಗೆ ಕಾರಣವಾಗಲಿದೆ. ಮತಿಹೀನರಾಗಿ ಬದುಕಿನಲ್ಲಿ ಬರಲಿರುವ ಉತ್ತಮ ಅವಕಾಶಗಳನ್ನು ಕಳೆದುಕೊಳ್ಳುವರು, ಜೂಜಾಟ ಇವರಿಗೆ ಬಲು ಪ್ರಿಯವಾಗಲಿದೆ. ಅತಿಲೋಭದಿಂದಾಗಿ ಪರರಿಗೆ ವಂಚನೆ ಮಾಡುವರು, ಸಾಧ್ಯವಾದಷ್ಟು ಗೋ ಸೇವೆ ಮಾಡುವುದು, ವಿಷ್ಣು ಸಹಸ್ರನಾಮ ಪಠಣ ಹಾಗೂ ಗುರುಗಳ ಸೇವೆ ಮಾಡಿದಲ್ಲಿ ಕಷ್ಟಗಳು ಪರಿಹಾರವಾಗಲಿವೆ.

**ಕರ್ಕಾಟಕ ರಾಶಿ :**
ಈ ರಾಶಿಯವರಿಗೆ ಗುರುವು ಲಾಭ ಸ್ಥಾನಕ್ಕೆ ಬರಲಿದ್ದು, ಸ್ವಸಾಮರ್ಥ್ಯದಲ್ಲಿ ಹೆಚ್ಚು ಆತ್ಮವಿಶ್ವಾಸ ಹೊಂದುವರು, ಹತ್ತು-ಹಲವು ಮಾರ್ಗಗಳಿಂದ ಆದಾಯವು ಕಂಡುಬರುವುದರಿಂದ ಮನೆ, ವಾಹನ, ಒಡವೆ-ವಸ್ತ್ರಗಳ ಖರೀದಿ ಜೋರಾಗಿಯೇ ನಡೆಯಲಿದೆ, ಗಣ್ಯವ್ಯಕ್ತಿಗಳ ಸಹವಾಸದಿಂದ ತಮ್ಮ ಘನತೆ ಹೆಚ್ಚಿಸಿಕೊಳ್ಳುವರು, ತನ್ನ ತಂದೆ-ತಾಯಿಗಳಲ್ಲಿ ಹಾಗೂ ಗುರು-ಹಿರಿಯರಲ್ಲಿ ಹೆಚ್ಚಿನ ಗೌರವಾದರಗಳನ್ನು ತೋರುವರು ಮತ್ತು ಅವರ ಇಷ್ಟಾರ್ಥಗಳನ್ನು ನೆರವೇರಿಸುವರು. ಅವಿವಾಹಿತರಿಗೆ ಅನಿರೀಕ್ಷಿತ ಪ್ರಸಂಗವೊಂದರಿಂದ ಕಂಕಣಭಾಗ್ಯ ಕೂಡಿಬರಲಿದೆ, ಅಧ್ಯಯನದಲ್ಲಿ ಹಿಂದುಳಿದಿದ್ದ ಮಕ್ಕಳ ವಿದ್ಯಾಭ್ಯಾಸ ಅನಾಯಾಸವಾಗಿ ಮುಂದುವರೆಯಲಿದೆ, ಬೆಲೆಬಾಳುವ ಸ್ವರ್ಣಾಭರಣ ವ್ಯಾಪಾರಿಗಳಿಗೆ ಲಾಭಾಧಿಕ್ಯ ವಾಗಲಿದೆ. ದಾನ-ಧರ್ಮ ಮಾಡಿ.

**ಸಿಂಹ ರಾಶಿ :**
ದಶಮ ಭಾವದಲ್ಲಿ ಗುರುಗ್ರಹ ಸಂಚಾರವಿರುವ ನಿಮಗೆ ಉತ್ತಮ ಸ್ನೇಹಿತರ ಪರಿಚಯವಾಗಲಿದೆ, ರಾಜಕಾರಣಿಗಳಿಗೆ ಅಧಿಕಾರ ಹಿಡಿಯುವ ಯೋಗ ಪ್ರಾಪ್ತಿಯಾಗಲಿದೆ. ಹೊಸ ಮನೆ ಕಟ್ಟುವ ಅಥವಾ ಖರೀದಿಸುವ ಸದವಕಾಶ ಬರಲಿದೆ. ಸಿನಿಮಾ ನಟರಿಗೆ ಉತ್ತಮ ಅವಕಾಶಗಳು ತಾವಾಗಿಯೇ ಅರಸಿಕೊಂಡು ಬರಲಿವೆ, ಕುಟುಂಬದ ಗೌರವ ಇವರಿಂದಾಗಿ ಹೆಚ್ಚಲಿದೆ, ಅಲ್ಲದೇ ತಮ್ಮ ಪೂರ್ವಿಕರಿಗಿಂತಲೂ ಹೆಚ್ಚಿನ ಕೀರ್ತಿವಂತರಾಗುವರು. ಆದರೆ ಅಸಂತೃಪ್ತಿ ಇವರನ್ನು ಸದಾ ಕಾಡಲಿದೆ. ಪೂರ್ವ ನಿಗದಿತ ಶುಭ ಕಾರ್ಯಗಳಿಗೆ ಮರುಚಾಲನೆ ಬರಲಿದೆ, ಉತ್ತಮ ಸ್ನೇಹಿತರ ಸಹವಾಸದಿಂದ ಯಶಸ್ಸಿನ ದಾರಿ ಸುಗಮವಾಗಲಿದೆ, ಉತ್ತಮ ಕಾರ್ಯಗಳಿಂದ ಸಂಪಾದನೆ ಉತ್ತಮ ಗೊಳ್ಳಲಿದ್ದು, ಮಡದಿ-ಮಕ್ಕಳಿಗೋಸ್ಕರ ವೆಚ್ಚ ಹೆಚ್ಚಲಿದೆ.

**ಕನ್ಯಾ ರಾಶಿ :**
ನವಮಭಾವದಲ್ಲಿ ಗುರು ಗ್ರಹದ ಯೋಗವಿದ್ದು, ಸರ್ಕಾರಿ ನೌಕರರಿಗೆ ಕೆಲಸದಲ್ಲಿ ಪದೋನ್ನತಿಯಾಗಲಿದ್ದು, ವೇತನದಲ್ಲಿ ಹೆಚ್ಚಳವಾಗಲಿದೆ, ಜೊತೆಗೆ ಜವಾಬ್ದಾರಿಯೂ ಹೆಚ್ಚುವುದು, ವಿದ್ಯಾರ್ಥಿಗಳಿಗೆ ಹೆಚ್ಚಿನ ಆಸಕ್ತಿ ಮೂಡಲಿದ್ದು, ಸದಾಚಾರ ವಿಚಾರಗಳಲ್ಲಿ ಮನಸ್ಸು ತಿರುಗುವುದು, ರಾಜಕಾರಣಿಗಳಿಗೆ ಜನಪ್ರಿಯತೆ ಯೊಂದಿಗೆ ಕೆಲವು ಪ್ರಮಾದಗಳಿಂದ ಆಪಾದನೆಗಳನ್ನು ಎದುರಿಸಬೇಕಾಗಬಹುದು. ಸಾಧು - ಸಜ್ಜನರ ಸೇವಾಭಾಗ್ಯ ನಿಮ್ಮದಾಗಲಿದೆ. ನಮ್ರತೆ, ಪ್ರಾಮಾಣಿಕತೆ, ಸತ್ಯವಾದ ನುಡಿ ಇವುಗಳು ಅವರ ಕೀರ್ತಿ ಪತಾಕೆಯನ್ನು ಹಾರಿಸಲಿದೆ. ಹಿಡಿದ ಕೆಲಸಗಳನ್ನು ಮಾಡಿ ಮುಗಿಸುವ ಛಲ ಮೂಡುವುದು. ಇವರು ಮಾಡುವ ಎಲ್ಲಾ ಕೆಲಸ ಕಾರ್ಯಗಳಿಗೆ ಸ್ನೇಹಿತರೊಂದಿಗೆ ಬಂಧು ಜನರೂ ಕೈಜೋಡಿಸುವರು. ಪರರಲ್ಲಿ ದಯವುಳ್ಳವರಾಗುವರು.

**ತುಲಾ ರಾಶಿ:**
ಅಷ್ಟಮ ಭಾವದಲ್ಲಿ ಗುರುವು ಸಂಚರಿಸಲಿದ್ದು, ನೀವು ಎಷ್ಟೇ ಕೆಲಸ-ಕಾರ್ಯಗಳನ್ನು ಮಾಡಿದರೂ ಯಜಮಾನನಿಗೆ ತೃಪ್ತಿಯಿರುವುದಿಲ್ಲ, ಮಿತಿ ಮೀರಿದ ಅಹಂಕಾರ ಅವರ ಅವನತಿಗೆ ಕಾರಣವಾಗಲಿದೆ, ನಯ-ವಿನಯಗಳಿಂದ ದೂರವಾಗಿ ಎಲ್ಲರ ತಿರಸ್ಕಾರಕ್ಕೆ ಒಳಗಾಗುವರು. ಅನಿವಾರ್ಯ ಪ್ರಸಂಗದಿಂದಾಗಿ ಬಂಧು-ವರ್ಗದಿಂದ ದೂರದೂರಿನಲ್ಲಿ ವಾಸ ಮಾಡಬೇಕಾಗ ಬಹುದು. ಅನಾರೋಗ್ಯ ಸಮಸ್ಯೆ ಪದೇ-ಪದೇ ಕಾಡಲಿದೆ. ಜೊತೆಗೆ ವ್ಯರ್ಥ ತಿರುಗಾಟ, ವ್ಯರ್ಥ ಖರ್ಚು ಅನಿವಾರ್ಯವಾಗಲಿದೆ. ಆದಾಯವು ಕಡಿಮೆಯಾಗಲಿದ್ದು, ಹೊಸ ಯೋಜನೆಗಳಿಗೆ ಕೈಹಾಕದಿರುವುದು ಮೇಲು, ದುರ್ವ್ಯಸನಗಳಿಂದ ದೂರವಾಗಿರುವುದು ಮೇಲು. ನೀಚರ ಸಹವಾಸದಿಂದ ಚಾರಿತ್ರ್ಯಕ್ಕೆ ಧಕ್ಕೆಯುಂಟಾಗ ಬಹುದು, ನಿತ್ಯ ಗುರುಚರಿತ್ರೆ ಪಾರಾಯಣ ಮಾಡಿ.

**ವೃಶ್ಚಿಕ ರಾಶಿ :**
ಸಪ್ತಮ ಭಾವದಲ್ಲಿ ಸಂಚರಿಸುವ ಗುರುವು ಸಂತಾನಾಪೇಕ್ಷಿಗಳ ಕೋರಿಕೆಯನ್ನು ಪೂರೈಸುವನು, ನವದಂಪತಿಗಳಲ್ಲಿದ್ದ ಭಿನ್ನಾಭಿಪ್ರಾಯ ದೂರವಾಗಿ, ಸಂಸಾರದಲ್ಲಿ ಸುಂದರ ಸರಿಗಮ ಮೂಡಲಿದೆ, ಅವಿವಾಹಿತರಿಗೆ ಕಂಕಣ ಭಾಗ್ಯ ಬೇಗನೆ ಕೂಡಿ ಬರಲಿದೆ, ಸಮಾಜದಲ್ಲಿ ಗಣ್ಯ ವ್ಯಕ್ತಿಗಳಿಂದ ಮಾನ-ಸನ್ಮಾನವಾಗಲಿದೆ. ಬುದ್ಧಿ ಚುರುಕುಗೊಂಡು ಎಲ್ಲಾ ಕೆಲಸ ಕಾರ್ಯಗಳಲ್ಲಿ ಜಯ ಸಾಧಿಸುವರು, ಹೆಚ್ಚಿದ ಸಂಪಾದನೆ ದುರ್ವ್ಯಸನಗಳಿಗೆ ಕಾರಣವಾಗದಂತೆ ಎಚ್ಚರ ವಹಿಸುವುದು ಮೇಲು, ಅಪರಿಚಿತ ಸ್ತ್ರೀಯರ ಸಹವಾಸ ಕಳಂಕವನ್ನು ತರಬಹುದು. ಗುರು-ಹಿರಿಯರಲ್ಲಿ ಹೆಚ್ಚಿದ ಭಕ್ತಿ ಸನ್ಮತಿಯನ್ನು ಮೂಡಿಸಬಹುದು. ಶಾಸ್ತ್ರಾಭ್ಯಾಸದಲ್ಲಿ ವಿಶೇಷ ಆಸಕ್ತಿ ಮೂಡಲಿದೆ, ಹೆಚ್ಚಿನ ಆದಾಯ ಧರ್ಮ ಕಾರ್ಯಗಳಿಗೆ ವಿನಿಯೋಗವಾಗಲಿದೆ.

**ಧನು ರಾಶಿ:**
ಈ ರಾಶಿಯರಿಗೆ ಗುರುವು ಷಷ್ಠ ಸ್ಥಾನದಲ್ಲಿದ್ದು, ಶತ್ರುಗಳನ್ನು ಜಯಿಸುವರು, ಜೊತೆಗೆ ಸಮರ್ಥ ಯುದ್ಧಾಳುಗಳಾಗುವರು, ಹಸು, ಕುದುರೆ, ಮೊದಲಾದ ಸಾಕು ಪ್ರಾಣಿಗಳ ಮೇಲೆ ಬಹಳ ಪ್ರೀತಿ ತೋರುವರು, ವ್ಯವಹಾರ ಅಥವಾ ವಿದ್ಯಾಭ್ಯಾಸ ನಿಮಿತ್ತ ವಿದೇಶ ಪ್ರವಾಸ ಮಾಡುವರು, ಈ ಮೊದಲು ಆರಂಭಿಸಿದ್ದ ಕಾರ್ಯಗಳಲ್ಲಿ ಉದಾಸೀನತೆ ಮೂಡಲಿದೆ, ಸಂಗೀತದಲ್ಲಿ ವಿಶೇಷ ಆಸಕ್ತಿ ತೋರುವರು, ಮನೆಯಲ್ಲಿ ಹಿರಿಯರಿಗೆ ಅನಾರೋಗ್ಯ ಸಮಸ್ಯೆ ಬಾಧಿಸಲಿದೆ. ತಾಯಿಯ ಕಡೆಯವರಿಂದ ಕಿರುಕಳ ನಿರಂತರವಾಗಲಿದೆ. ಹಣ ಸಂಪಾದನೆ ಉತ್ತಮವಾಗಿದ್ದರೂ, ಉಳಿತಾಯ ಕಂಡುಬರುವುದಿಲ್ಲ. ಹೆಸರು, ಕೀರ್ತಿ ಗಳಿಸುವ ಹಂಬಲ ಹೆಚ್ಚಲಿದೆ. ವೈಯಕ್ತಿಕ ಆರೋಗ್ಯದಲ್ಲೂ ಏರುಪೇರುಕಂಡುಬರಲಿದೆ.

**ಮಕರ ರಾಶಿ :**
ಪಂಚಮ ಭಾವದಲ್ಲಿರುವ ಗುರುವು ಈ ರಾಶಿಯವರಿಗೆ ಮಠ-ಮಾನ್ಯಗಳಿಂದ ವಿಶೇಷ ಸನ್ಮಾನವಾಗಲಿದ್ದು, ಉತ್ತಮ ಆಚಾರ-ವಿಚಾರಗಳಲ್ಲಿ ಶ್ರದ್ಧೆ ಹೆಚ್ಚಲಿದೆ. ನಾನಾ ಮೂಲಗಳಿಂದ ಆದಾಯವು ಹರಿದು ಬರಲಿದ್ದು, ಚರ-ಸ್ಥಿರ ಆಸ್ತಿ ಕೊಳ್ಳುವರು ತರ್ಕದಲ್ಲಿ ಪಾಂಡಿತ್ಯವುಳ್ಳ ಇವರು ಊಹಾಪೋಹಗಳಲ್ಲಿ ಚಾಣಾಕ್ಷರಾಗುವರು. ಯಾವುದೇ ಕೆಲಸ-ಕಾರ್ಯಗಳಿಗೆ ಏನೇ ಅಡ್ಡಿ-ಆತಂಕ ಬಂದರೂ ಹಿಂಜರಿಯದೇ ಮಾಡಿ ಮುಗಿಸುವರು. ಸಂತಾನಾಪೇಕ್ಷಿಗಳ ಬಹುದಿನದ ಬಯಕೆ ಈಡೇರಲಿದೆ, ಯುವಜನರು ಪಾರಂಪರಿಕ ವಾದ ವ್ಯವಹಾರವನ್ನೇ ಮುಂದುವರೆಸುವರು, ದುಷ್ಟಗಳು ದೂರವಾಗಲಿವೆ, ಧಾರ್ಮಿಕ ಉತ್ಸವಗಳಲ್ಲಿ ಭಾಗವಹಿಸುವರು. ಸಮಯಕ್ಕೆ ತಕ್ಕ ನಡೆ-ನುಡಿಯನ್ನು ರೂಢಿಸಿಕೊಳ್ಳುವರು.

**ಕುಂಭ ರಾಶಿ :**
ಈ ರಾಶಿಯವರಿಗೆ ಗುರುವು ಚತುರ್ಥ ಸ್ಥಾನಕ್ಕೆ ಬರಲಿದ್ದು, ಅತ್ಯಂತ ಸೌಖ್ಯವುಳ್ಳವರಾಗುವರು, ಮನೆಯಲ್ಲಿ ಮಂಗಳ ಕಾರ್ಯಗಳು ಮೇಲಿಂದ ಮೇಲೆ ನಡೆಯುತ್ತಲೇ ಇರುವವು. ಕುಲ ದೇವತಾನುಗ್ರಹ ಇರುವುದರಿಂದ ಹಿಡಿದ ಕಾರ್ಯಗಳಲ್ಲಿ ಯಶಸ್ಸು ಕಾಣುವರು. ಮನಸ್ಸಿನಲ್ಲಿ ಒಂದಲ್ಲಾವೊಂದು ಚಿಂತೆ ನಿರಂತರ ಕಾಡಲಿದೆ. ಹಲವಾರು ಕಡೆಯಿಂದ ಬರಬೇಕಾಗಿರುವ ಹಣ ಸಕಾಲದಲ್ಲಿ ಕೈಸೇರಲಿದೆ. ಸರ್ಕಾರದಿಂದಾಗಬೇಕಾಗಿರುವ ಕೆಲಸಗಳು ಸುಲಲಿತವಾಗಿ ಕೈಗೂಡಲಿವೆ, ಸ್ಥಿರ ಅಥವಾ ಚರಾಸ್ತಿಗಳನ್ನು ಕೊಳ್ಳಲು ಇದು ಸಕಾಲವಾಗಿದೆ, ತಾಯಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಾಣಲಿದೆ. ಸಾಮಾಜಿಕ ಸೇವೆಯಲ್ಲಿ ಹೆಚ್ಚಿನ ಆಸಕ್ತಿ ತೋರುವ, ನಿಮಗೆ ಅನೇಕ ರೀತಿಯಲ್ಲಿ ಸನ್ಮಾನವಾಗಲಿದೆ.

**ಮೀನ ರಾಶಿ:**
ತೃತೀಯ ಭಾವದಲ್ಲಿ ಗುರು ಗ್ರಹವು ಸಂಚರಿಸಲಿರುವ ಈ ರಾಶಿಯವರಿಗೆ ಅತಿಯಾದ ಸಾಂಸಾರಿಕ ಮೋಹ ಕಾಡಲಿದೆ. ಎಷ್ಟೇ ಧಾರಾಳಿಗಳಾಗಿದ್ದರೂ ಕೆಲವು ವಿಚಾರಗಳಲ್ಲಿ ಕಡು ಜಿಪುಣತನ ತೋರುವರು, ಅರ್ಥವಿಲ್ಲದ ಚಿಂತೆಯಿಂದಾಗಿ ಆರೋಗ್ಯವನ್ನು ವ್ಯರ್ಥಮಾಡಿಕೊಳ್ಳುವರು, ಅಗ್ನಿಮಾಂದ್ಯ, ಅಜೀರ್ಣಾದಿಗಳು ತಪ್ಪಿದ್ದಲ್ಲ. ಆಚಾರ, ವಿಚಾರಗಳಲ್ಲಿ ಯಾಂತ್ರಿಕತೆ ಕಂಡುಬರಲಿದೆ, ಮಿತ್ರರೊಂದಿಗೆ ವಿನಾಕಾರಣ ಮನಸ್ತಾಪ, ಸೋದರರ ಬೆಂಬಲದಿಂದ ಸಮಾಜದಲ್ಲಿ ಸ್ಥಾನ-ಮಾನ ಗಳಿಸುವರು. ಗಳಿಕೆ ಚೆನ್ನಾಗಿಯೇ ಇದ್ದರೂ ಆಲಸ್ಯ ಸಂಪಾದನೆಗೆ ಮಾರಕವಾಗಲಿದೆ. ರಾಜಕೀಯ ವ್ಯಕ್ತಿಗಳ ಮಧ್ಯೆ ಗುರುತಿಸಿಕೊಳ್ಳಲು ಹವಣಿಸುವರು, ಬೇರೆಯವರು ಮಾಡಿದ ಉಪಕಾರದ ಸ್ಮರಣೆಯಿರುವುದಿಲ್ಲ.

**ವಿಶೇಷ ಸೂಚನೆ : ಮೇಲ್ಕಂಡ ವಿಶ್ಲೇಷಣೆ ಕೇವಲ ಗುರುಗ್ರಹಕ್ಕೆ ಮಾತ್ರ ಸಂಬಂಧಿಸಿದ್ದು, ಅವರವರ ಜಾತಕ ಹಾಗೂ ದಶಾಭುಕ್ತಿಗೆ ಅನುಗುಣವಾಗಿ ಫಲಾಫಲಗಳಲ್ಲಿ ವ್ಯತ್ಯಾಸವಾಗುವ ಸಂಭವವಿರುತ್ತದೆ, ಆದ್ದರಿಂದ ಹೆಚ್ಚಿನ ವಿಚಾರಗಳಿಗೆ ನಿಮ್ಮ ಆತ್ಮೀಯ ಜ್ಯೋತಿಷ್ಕರಲ್ಲಿ ವಿಚಾರಿಸಿ ತಿಳಿಯಿರಿ.**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ. ಫೋ. : 94486 66678**

# ಸರ್ವರ ಏಳಿಗೆ ಬಯಸುವವರೇ ವೀರಶೈವರು

## ನ್ಯಾಮತಿ ತಾ. ಚೀಲೂರು ಗ್ರಾಮದಲ್ಲಿ ಇಷ್ಟಲಿಂಗ ಪೂಜೆ - ಧರ್ಮಸಭೆಯಲ್ಲಿ ಶ್ರೀಶೈಲ ಜಗದ್ಗುರುಗಳು

ನ್ಯಾಮತಿ, ಮೇ 11- ವೀರಶೈವರಿಗೆ ಜಾತಿ ಭೇದ ಇಲ್ಲ. ಸರ್ವರ ಏಳಿಗೆ ಬಯಸುವವರೇ ವೀರಶೈವರು ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಶ್ರೀ ಬಸವೇಶ್ವರ ಸ್ವಾಮಿ ಸೇವಾ ಸಮಿತಿಯ ವತಿಯಿಂದ ತಾಲ್ಲೂಕಿನ ಚೀಲೂರು ಗ್ರಾಮದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಇಷ್ಟಲಿಂಗ ಪೂಜೆ - ಧರ್ಮಸಭೆಯಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ವೃತ್ತಿಗೆ ಅನುಕೂಲ ಆಗಲಿ ಎಂಬ ಉದ್ದೇಶದಿಂದ ಜಾತಿ ಮಾಡಿಕೊಂಡಿದ್ದೇವೆ. ವೀರಶೈವ ಎಂದರೆ ಪ್ರತಿ ದಿನ ಇಷ್ಟಲಿಂಗ ಪೂಜಿಸುವವರು ಎಂಬ ಅರ್ಥ ಇದೆ. ಎಲ್ಲರನ್ನೂ ಗೌರವಿಸುವುದು, ಎಲ್ಲರೊಂದಿಗೆ ಪ್ರೀತಿಯಿಂದ ಜೀವಿಸುವುದು ಧರ್ಮವಾಗಿದೆ. ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವ ದಾರಿಯಲ್ಲಿ ಸಾಗುವುದೇ ನೈಜ ಧರ್ಮ. ಆದ್ದರಿಂದ, ಎಲ್ಲರೂ ಧರ್ಮ ಮಾರ್ಗದಲ್ಲಿ ನಡೆದು ಉತ್ತಮ ಬದುಕು ಸಾಗಿಸಬೇಕು. ಸಮಾಜದಲ್ಲಿ ಎಲ್ಲರೊಂದಿಗೆ ಸಹಬಾಳ್ವೆ ನಡೆಸಬೇಕು. 'ವೀರಶೈವ ಲಿಂಗಾಯತರೇ ನಾವೆಲ್ಲ ಒಂದು, ವಿಶ್ವವೇ ನಮ್ಮ ಬಂಧು' ಎಂಬ ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಆಸ್ತಿಕತೆ - ನಾಸ್ತಿಕತೆ ಬಗ್ಗೆ ಪ್ರಾಚೀನ ಕಾಲದಿಂದಲೂ ವಾದ - ವಿವಾದಗಳು ನಡೆದುಕೊಂಡು ಬಂದಿವೆ. ಆದರೆ, ದೇವರ ಅಸ್ತಿತ್ವ ಅನನ್ಯ, ಅನುಪಮ. ದೇವರನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ನಮ್ಮ ದೇಹದಲ್ಲಿ ಪಂಚಭೂತಗಳ ಅಂಶಗಳು ಇವೆ. ದೇವರು ಇದ್ದಾನೆ ಎಂಬುದಕ್ಕೆ ನಮ್ಮ ಅಸ್ತಿತ್ವವೇ ಸಾಕ್ಷಿ ಎಂದು ಪ್ರತಿಪಾದಿಸಿದರು.

**ಕೊಠಡಿಗಳ ನಿರ್ಮಾಣಕ್ಕೆ ಕ್ರಮ :** ಶ್ರೀಶೈಲ ಪೀಠಕ್ಕೆ ಆಗಮಿಸುವ ಭಕ್ತರಿಗೆ ಕೊಠಡಿಗಳ ಕೊರತೆಯಿಂದಾಗಿ ಸಮಸ್ಯೆಯಾಗುತ್ತಿದೆ. ಇದನ್ನು ಮನಗಂಡು ಆಂಧ್ರಪ್ರದೇಶ ರಾಜ್ಯ ಸರ್ಕಾರದೊಂದಿಗೆ ಮಾತುಕತೆ ನಡೆಸಿ, 10 ಎಕರೆ ಜಾಗವನ್ನು ಪಡೆದುಕೊಳ್ಳಲಾಗಿದೆ. ಆ ಪೈಕಿ 5 ಎಕರೆ ಪ್ರದೇಶದಲ್ಲಿ ಗೋಶಾಲೆ, ಐಸಿಎಸ್‌ಇ ಶಿಕ್ಷಣ ಸಂಸ್ಥೆ, ಕಂಬಿ ಮಂಟಪ, ಆಸ್ಪತ್ರೆ ಹಾಗೂ 500 ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.



ಈಗಾಗಲೇ ಭಕ್ತರು 300 ಕೊಠಡಿಗಳ ನಿರ್ಮಾಣಕ್ಕೆ ಹಣ ನೀಡುವುದಾಗಿ ವಾಗ್ದಾನ ಮಾಡಿದ್ದಾರೆ. ಇತರೆ ಕಾರ್ಯಗಳಿಗೂ ಭಕ್ತರು ದಾನ ನೀಡಬಹುದು ಎಂದು ತಿಳಿಸಿದರು.

ಮುಂದಿನ ವರ್ಷ ಶ್ರೀಶೈಲ ಪಾದಯಾತ್ರೆ ಸಂದರ್ಭದಲ್ಲಿ ಹೊನ್ನಾಳಿಯಿಂದ ಶ್ರೀಶೈಲ ಪೀಠಕ್ಕೆ ಶ್ರೀ ಜಡೆಯ ಶಂಕರ ಮಹಾಸ್ವಾಮಿಗಳು ಮತ್ತು ಶ್ರೀ ಚನ್ನಪ್ಪ ಸ್ವಾಮಿಗಳ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಹೊತ್ತು ತರುವ ಸಂಕಲ್ಪವನ್ನು ಹಿರೇಕಲ್ಮಠದ ಒಡೆಯರ್ ಡಾ.ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮಾಡಿದ್ದಾರೆ. ಈ ಮಹತ್ಕಾರ್ಯಕ್ಕೆ ಎಲ್ಲರೂ ಕೈಜೋಡಿಸಿ. ಶ್ರೀಶೈಲಕ್ಕೆ ಪಾದಯಾತ್ರೆ ಬನ್ನಿ ಎಂದು ಭಕ್ತರಿಗೆ ನುಡಿದರು.

ಹೊನ್ನಾಳಿ ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಮನುಷ್ಯನಿಗೆ ಆಯುಷ್ಯ, ಕೀರ್ತಿ, ಯಶೋಬಲ ಸೇರಿದಂತೆ ಸಕಲವೂ ಗುರುಗಳ ಸೇವೆಯಿಂದ ಲಭಿಸುತ್ತದೆ. ಆದ್ದರಿಂದ, ಎಲ್ಲರೂ ಸೇವಾ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಪಾವನರಾಗಬೇಕು ಎಂದು ತಿಳಿಸಿದರು.

ಪಾದಯಾತ್ರೆಯಿಂದ ಮನುಷ್ಯನ ಆರೋಗ್ಯ ವರ್ಧಿಸುತ್ತದೆ. ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೃದಯ ಸಂಬಂಧಿ ರೋಗಗಳು ಸೇರಿದಂತೆ ಅನೇಕ ವ್ಯಾಧಿಗಳನ್ನು ಇಲ್ಲವಾಗಿಸಬಹುದು. ಆದ್ದರಿಂದ, ಎಲ್ಲರೂ ಪಾದಯಾತ್ರೆ ಮಾಡಬೇಕು. ಹೊನ್ನಾಳಿಯಿಂದ ಶ್ರೀಶೈಲ ಪೀಠಕ್ಕೆ ನಾವು ಕಳೆದ ಎಂಟು ವರ್ಷಗಳಿಂದ ಪಾದಯಾತ್ರೆ ಮಾಡುತ್ತಿದ್ದೇವೆ. ಮುಂದಿನ ವರ್ಷ 9ನೇ ವರ್ಷದ ಪಾದಯಾತ್ರೆ ನಡೆಸುತ್ತೇವೆ. ಅದರಲ್ಲಿ ಹೊನ್ನಾಳಿಯಿಂದ 1008 ಜನರು ಪಾಲ್ಗೊಳ್ಳಬೇಕು. ಈ ಹಿಂದೆ ಶ್ರೀಶೈಲ ಪೀಠದಿಂದ ಹೊನ್ನಾಳಿಗೆ ಪಾದಯಾತ್ರೆ ಮೂಲಕ ಆಗಮಿಸಿದ್ದ ಜಗದ್ಗುರು ಜಡೆಯ ಶಂಕರರು ಹೊನ್ನಾಳಿ ಭಾಗವನ್ನು ಧಾರ್ಮಿಕ ಕೇಂದ್ರವನ್ನಾಗಿಸಿ ಜಾಗೃತಿ ಮೂಡಿಸಿದ್ದರು. ಅದರ ಸ್ಮರಣಾರ್ಥ ಹೊನ್ನಾಳಿಯಿಂದ ಶ್ರೀಶೈಲ ಪೀಠಕ್ಕೆ ಶ್ರೀ ಜಡೆಯ ಶಂಕರ ಮಹಾಸ್ವಾಮಿಗಳು ಮತ್ತು ಶ್ರೀ ಚನ್ನಪ್ಪ ಸ್ವಾಮಿಗಳ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಹೊತ್ತು ತೆರಳುವ ಸಂಕಲ್ಪ ಮಾಡಲಾಗಿದೆ. ಎಲ್ಲರೂ ಇದರಲ್ಲಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ರಾಂಪುರ ಬೃಹನ್ಮಠದ ಶ್ರೀ ಶಿವಕುಮಾರ ಶಿವಾಚಾರ್ಯ ಹಾಲಸ್ವಾಮೀಜಿ, ಗೋವಿನಕೋವಿ ಹಾಲಸ್ವಾಮಿ ಮಠದ ಶ್ರೀ ಶಿವಯೋಗಿ ಮಹಾಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಹೆಚ್.ಎ. ಉಮಾಪತಿ, ಚೀಲೂರು ಮುಖಂಡರಾದ ಯತೀಶ್‌ಚಂದ್ರ ಕೋರಿ, ಚೇತನ್ ಹುಲಿಕೆರೆ, ಗಿರೀಶ್ ಹುಲಿಕೆರೆ, ಜವಳಿ ಪ್ರದೀಪ್, ಜವಳಿ ಚಂದ್ರಶೇಖರ್, ಜವಳಿ ಮಹೇಶ್, ಕೆ.ಶಿವಲಿಂಗಪ್ಪ, ಕೆ. ಮಲ್ಲಿಕಾರ್ಜುನ್, ಜವಳಿ ವೀರೇಶ್ ಇತರರಿದ್ದರು.

# ನಗರದಲ್ಲಿ ಇಂದು ಪಾರಂಪರಿಕ ಬೀಜೋತ್ಸವ

ದಾವಣಗೆರೆ, ಮೇ 11 - ನಗರದ ಐ.ಸಿ.ಎ.ಆರ್. - ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ನಾಳೆ ದಿನಾಂಕ 12ರ ಭಾನುವಾರ ಬೆಳಿಗ್ಗೆ 9ರಿಂದ ಪಾರಂಪರಿಕ ಬೀಜೋತ್ಸವ ಕಾರ್ಯಕ್ರಮ ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ವಿಜ್ಞಾನಿ ಎಂ. ಜಿ. ಬಸವನಗೌಡ, ಕೃಷಿ ವಿಜ್ಞಾನ ಕೇಂದ್ರ, ಐಕಾಂತಿಕ ಸಂಘ ಹಾಗೂ ಸಹಜ ಸಮೃದ್ಧ ಸಂಘಗಳ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು.

ಸಾಂಪ್ರದಾಯಿಕ ಬೀಜ ಪರಂಪರೆಯ ವೈಭವ ಬಿಂಬಿಸಲು ಹಾಗೂ ಸ್ಥಳೀಯ ಆಹಾರ ಸಂಸ್ಕೃತಿಗಳ ಪರಿಚಯ ಮಾಡಿಸಲು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದವರು ತಿಳಿಸಿದರು.

ಇದೇ ವೇಳೆ ರಾಜ್ಯದ ಬೀಜ ಸಂರಕ್ಷಕರನ್ನು ಒಂದೇ ವೇದಿಕೆಯಲ್ಲಿ ತರಲು 'ಕರ್ನಾಟಕ ಬೀಜ ಸಂರಕ್ಷಕರ ಬಳಗ' ಆರಂಭಿಸಲಾಗುವುದು. ಕೈ ತೋಟ ಆಸಕ್ತರನ್ನು ಒಗ್ಗೂಡಿಸಿ 'ಪೌಷ್ಠಿಕ ಕೈತೋಟ ಒಕ್ಕೂಟ'ವನ್ನೂ ರಚಿಸಲಾಗುವುದು ಎಂದು ತಿಳಿಸಿದರು.

ಈ ಕಾರ್ಯಕ್ರಮವನ್ನು ಕೋಲಾರದ ಬೀಜ ಮಾತೆ ಪಾಪಮ್ಮ ಹಾಗೂ ಮೈಸೂರಿನ ಬೀಜ ಮಾತೆ ಪದ್ಮಾವತಮ್ಮ ಉದ್ಘಾಟಿಸಲಿದ್ದಾರೆ. ಸಹಜ ಸಮೃದ್ಧ ಸಂಸ್ಥೆಯ ಮುಖ್ಯಸ್ಥ ಕೃಷ್ಣಪ್ರಸಾದ್, ಐಕಾಂತಿಕ ಸಹಜ ಕೃಷಿಕ ರಾಘವ, ರಾಜ್ಯೋತ್ಸವ ಪ್ರಶಸ್ತಿ ವಿಜೇತ ವಿಶ್ವೇಶ್ವರ ಸಜ್ಜನ್ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ತೋಟಗಾರಿಕೆ ಪರಿಣಿತ ರಾಜೇಂದ್ರ ಹೆಗಡೆ ಅವರು ಕೈತೋಟದ ಕುರಿತು ತರಬೇತಿ ನೀಡಲಿದ್ದಾರೆ.

ಕೈತೋಟದ ತರಬೇತಿ ನೀಡುವ ಜೊತೆಗೆ, ಅಗತ್ಯ ಪರಿಕರಗಳ ಮಾರಾಟ ವ್ಯವಸ್ಥೆಯೂ ಇರಲಿದೆ. ಪಾರಂಪರಿಕ ಬೀಜ ಹಾಗೂ ತಳಿಗಳ ವಿತರಣೆಗೂ ಅವಕಾಶ ಇರಲಿದೆ. ಸಾವಿರಕ್ಕೂ ಹೆಚ್ಚು ಪಾರಂಪರಿಕ ಬೀಜ ಹಾಗೂ ತಳಿಗಳ ಪ್ರದರ್ಶನ ಮಾಡಲಾಗುವುದು ಎಂದು ಬಸವನಗೌಡ ತಿಳಿಸಿದರು.

ಇಡೀ ಪ್ರದರ್ಶನವನ್ನು ನಿಸರ್ಗಕ್ಕೆ ಸನಿಹವಾಗಿ ಹಾಗೂ ಸಹಜ ವಾತಾವರಣದಲ್ಲಿ ನಡೆಸುವ ಉದ್ದೇಶವಿದೆ. ಪ್ಲಾಸ್ಟಿಕ್ ಮುಕ್ತವಾಗಿ ಕಾರ್ಯಕ್ರಮ ನಡೆಸುವ ಗುರಿ ಇದೆ. ಸಾವಯವ ಊಟ ಹಾಗೂ ಪಾನೀಯಗಳ ವ್ಯವಸ್ಥೆ ಮಾಡಲಾಗುವುದು ಎಂದೂ ಅವರು ಹೇಳಿದರು.

ಪಾರಂಪರಿಕ ತಳಿಗಳಲ್ಲಿ ಪೌಷ್ಠಿಕಾಂಶದ ಪ್ರಮಾಣ ಹೆಚ್ಚಾಗಿರುತ್ತದೆ. ಹೀಗಾಗಿ ಕೈತೋಟ ಮಾಡಿಕೊಂಡವರು ಪಾರಂಪರಿಕ ತಳಿಗಳನ್ನು ಬಳಸುವಂತೆ ಉತ್ತೇಜಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಐಕಾಂತಿಕದ ರಾಘವ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಐ.ಸಿ.ಎ.ಆರ್.ನ ವಿಜ್ಞಾನಿ ಸುಪ್ರಿಯ, ಸಹಜ ಕೃಷಿಕ ಹನುಮಂತಪ್ಪ, ಐಕಾಂತಿಕದ ಸುಜಿತ್ ಕುಮಾರ್ ಹಾಗೂ ಅಭಿಷೇಕ್ ಉಪಸ್ಥಿತರಿದ್ದರು.

# ಜಿಎಸ್ಟಿ ಬಿಲ್ ನೀಡದ ಬೋರ್‌ವೆಲ್ ಡ್ರಿಲ್ಲರ್ ವಿರುದ್ಧ ಕ್ರಮಕ್ಕೆ ಆಗ್ರಹ

**ರಾಣೇಬೆನ್ನೂರು**

ರಾಣೇಬೆನ್ನೂರು, ಮೇ 11- ರೈತರ ಹೊಲಗಳಲ್ಲಿ ಕೊಳವೆ ಬಾವಿ ಕೊರೆಯುವ ಡ್ರಿಲ್ಲರ್‌ಗಳು ಜಿಎಸ್‌ಟಿ ಬಿಲ್ ಒದಗಿಸದೇ ರೈತರಿಂದ ಹೆಚ್ಚಿನ ಹಣ ಪಡೆಯುತ್ತಿದ್ದು, ಇಂತವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ (ಹಸಿರು ಸೇನೆ) ಒತ್ತಾಯಿಸಿದೆ.

ಸರ್ಕಾರದ ಅನುಮತಿ ಪಡೆಯದೇ ತಮಿಳುನಾಡಿನಿಂದ ರಾಜ್ಯಕ್ಕೆ ಬಂದ ಬೋರ್‌ವೆಲ್ ಡ್ರಿಲ್ಲರ್‌ಗಳು ಪೆಟ್ರೋಲ್, ಡೀಸೆಲ್ ದರದ ನೆಪದಲ್ಲಿ ರೈತರಿಂದ ಹೆಚ್ಚಿನ ಹಣ ವಸೂಲಿ ಮಾಡುತ್ತಿದ್ದು, ಶೀಘ್ರವೇ ಜಿಎಸ್‌ಟಿ ನಂಬರ್ ಇಲ್ಲದ ಬೋರ್‌ವೆಲ್ ಡ್ರಿಲ್ಲರ್‌ಗಳನ್ನು ಕಂಡು ಹಿಡಿದು, ರೈತರಿಗೆ ಆಗುವ ಅನ್ಯಾಯ ತಪ್ಪಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.


**ತಕ್ಷಣ ಬೇಕಾಗಿದ್ದಾರೆ**

ಆಟೋಮೊಬೈಲ್ ಅನುಭವವಿರುವವರು
- Jr. Technician - 3 Years experience
- Sr. Technician - 5 years experience
- Sales Executive - 5 years experience

ಗಜೇಂದ್ರ ಟ್ರಕ್ಸ್ ಸೇಲ್ಸ್ ಮತ್ತು ಸರ್ವೀಸಸ್
GAJENDRA TRUCKS SALES & SERVICES
TATA - Small Commercial Vehicles Dealer
ಓಷಿಯನ್ ಪಾರ್ಕ್ ಹೋಟೆಲ್ ಪಕ್ಕ, ಜಿ.ಎಂ.ಐ.ಟಿ. ಕಾಲೇಜು ಎದುರು, ಪಿ.ಬಿ. ರಸ್ತೆ, ದಾವಣಗೆರೆ - 577006. ಫೋ. : 6364888474


# ಉಜ್ಜಯಿನಿಯಲ್ಲಿ ಇಂದು ಮರುಳ ಸಿದ್ದೇಶ್ವರ ಜಾತ್ರೆ

ಕೊಟ್ಟೂರು ತಾಲ್ಲೂಕಿನ ಉಜ್ಜಿನಿ ಗ್ರಾಮದ ಶ್ರೀ ಮರುಳ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋ ತ್ಸವ ಇಂದು ಮತ್ತು



ನಾಳೆ ಜರುಗಲಿದೆ ಎಂದು ಉಜ್ಜಯಿನಿ ಪೀಠದ ಶ್ರೀ ಜಗದ್ಗುರು ಸಿದ್ಧಲಿಂಗ ರಾಜದೇಶಿ ಕೇಂದ್ರ ಶಿವಾಚಾರ್ಯ ಮಹಾ ಸ್ವಾಮೀಜಿ ತಿಳಿಸಿದ್ದಾರೆ. ಇದರ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮ, ಸಾಮೂಹಿಕ ವಿವಾಹಗಳು ಸೇರಿದಂತೆ ಧಾರ್ಮಿಕ ಕಾರ್ಯಗಳು ನಡೆಯುತ್ತವೆ ಎಂದು ತಿಳಿಸಿದ್ದಾರೆ.


**ಮಳಿಗೆ ಬಾಡಿಗೆಗಿದೆ**

ಕೆ.ಬಿ.ಬಡಾವಣೆ, ಲಾಯರ್ ರಸ್ತೆ, 1ನೇ ಮಹಡಿಯಲ್ಲಿ
40x44 ಅಡಿ, ಫರ್ನೀಚರ್ ಸಮೇತ
ಎ.ಸಿ. ಸೌಲಭ್ಯವಿರುವ LIC ಆಫೀಸ್ ಮತ್ತು ಬ್ಯಾಂಕ್‌ಗೆ ಅನುಕೂಲವಾದ ಮಳಿಗೆ ಬಾಡಿಗೆಗಿದೆ.
ಮಧ್ಯವರ್ತಿಗಳೂ ಸಹ ಸಂಪರ್ಕಿಸಬಹುದು.
97384 62378, 88928 44854, 96665 53640

**ಮೆ|| ಆರ್.ಹನುಮಂತಪ್ಪ ಅಂಡ್ ಸನ್**
ಹನುಮಂತಪ್ಪನವರ ಕಟ್ಟಡ, ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ - 577002. ಫೋ.: 258834, 9449828834

**ಬೇಕಾಗಿದ್ದಾರೆ**
ಮೇಲ್ಕಂಡ ಸಂಸ್ಥೆಯಲ್ಲಿ ಗೋಡೌನ್‌ಗಳ ಸೂಪರ್ ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ.
PUC/JOC/Diploma ಹೊಂದಿದವರಿಗೆ ಮೊದಲ ಆದ್ಯತೆ
ಆಸಕ್ತರು ಕೂಡಲೇ ಸಂಪರ್ಕಿಸಿ

SSIMS SPARSH
CENTRE FOR ACCIDENTS BONE & JOINT CARE

**ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,**
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಾ ತಜ್ಞರು
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

**ಡಾ. ರವಿಕುಮಾರ್ ಮುಕಾರ್ತಿಹಾಳ್**
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

- ಕೀಲು ನೋವು
- ಮೊಣಕಾಲು ನೋವು
- ಭುಜದ ನೋವು
- ಸ್ಪೋರ್ಟ್ಸ್ ಇಂಜುರೀಸ್
- ಕೀಲು ಮರುಜೋಡಣೆ
- ಹಿಪ್ ಮರುಜೋಡಣೆ
- ರಿವಿಷನ್ ಶಸ್ತ್ರಚಿಕಿತ್ಸೆ
- ಡಿಫಾರ್ಮಿಟಿ ಸರಿಪಡಿಸುವಿಕೆ

ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಮಂಗಳವಾರ, 14ನೇ ಮೆ 2024 । ಸಮಯ: ಬೆಳಿಗ್ಗೆ 11 ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ವಾಸಿ ಶ್ರೀ ದೊಗ್ಗಳ್ಳಿ ದಯಾನಂದ ಬಿನ್ ಲೇಟ್ ದೊಗ್ಗಳ್ಳಿ ಪರಮೇಶ್ವರಪ್ಪ, ವಯಸ್ಸು ಸುಮಾರು 61 ವರ್ಷ, ವಾಸ : ಡೋರ್ ನಂ. 212/2, ನರಸರಾಜ ರಸ್ತೆ, ದಾವಣಗೆರೆ. ಆದ ನಾನು (ಮೊ. : 8217714090)


ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ದಿನಾಂಕ : 21.10.2023 ರಂದು ಮತ್ತು 18-11-2023 ರಂದು ಸದರಿ 28.04.2024 ರಂದು ಜನತಾವಾಣಿ ಪತ್ರಿಕೆಯಲ್ಲಿ ಪ್ರಕಟಿಸಿರುವ ನಮ್ಮ ಸ್ವಂತ ಆಸ್ತಿಗಳು ಮಾರಾಟಕ್ಕೆ ಇರುವುದಿಲ್ಲ. ಈ ವಿಷಯಕ್ಕೆ ಮುಂದಿನ ನಡೆ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಕಡೆಗೆ ಮೇಲ್ಮನವಿಯು ಮುಂದುವರೆಯುತ್ತದೆ. ಈ ವಿಷಯವನ್ನು ಮಹಾ ಜನತೆಗೆ ತಿಳಿಸಲು ಈ ಪ್ರಕಟಣೆ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ವಂದನೆಗಳೊಂದಿಗೆ,

ದಿನಾಂಕ : 11.05.2024
ಸ್ಥಳ : ದಾವಣಗೆರೆ.

ಇಂತಿ ತಮ್ಮ ವಿಶ್ವಾಸಿ
ಸಹಿ/- ದೊಗ್ಗಳ್ಳಿ ದಯಾನಂದ

## ಜನ್ಮ ದಿನದ ಶುಭಾಶಯಗಳು



ಇಂದು ತಮ್ಮ 60ನೇ ವರ್ಷದ ಜನ್ಮ ದಿನದ ಸಂಭ್ರಮದಲ್ಲಿರುವ ನಮ್ಮ ಆತ್ಮೀಯ ಮಿತ್ರರಾದ

**ಶ್ರೀ ಭೀಮಾನಂದ ಶೆಟ್ಟಿ**

ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

- ಪಿಕಾಕ್ ಸ್ನೇಹ ಬಳಗ
- ಸಮಾನ ಮನಸ್ಕರ ಸ್ನೇಹಬಳಗ
- ಕಲಾಸಿರಿ ಸ್ನೇಹ ಬಳಗ
- ವಾಯುವಿಹಾರ ಸ್ನೇಹ ಬಳಗ
- ಲಯನ್ಸ್ ಕ್ಲಬ್ ದಾವಣಗೆರೆ.




KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas